# HAVYAKA SANDESHA

# ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. 33 No. 06 APRIL 2024 Pages 16 Rs. 2/-




## KARKI SURI AWARD FUNCTION





*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

# GLIMPSES OF KARKI SURI AWARD FUNCTION



"**Havyaka Sandesha**" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098.

| | | |
|---|---|---|
| ***Hon. Editor*** | : | Smt. Amita S. Bhagwat |
| ***Editorial Committee*** | | Smt. Shashikala Hegde<br>Smt. Tanuja Hegde<br>Shri Ganesh Bhat<br>Smt. Shailaja Hegde |
| ***Publisher*** | : | Vasant Bhat |
| ***Printed at*** | : | M/s. Navin Printers<br>Mumbai - 400 016.<br>✆ 2430 8316 |

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2023-2024**

| | | |
|---|---|---|
| ***President*** | : | Shivkumar P. Bhagwat |
| ***Vice - President*** | : | Vishnu Bhagwat |
| ***Hon. Gen. Secretary*** | : | Vasant Bhat |
| ***Hon. Jt. Secretary*** | : | G. V. Hegde |
| ***Hon. Treasurer*** | : | Ganesh Bhat |

***Elected Members :***

| | |
|---|---|
| Narayan Akadas | Umesh Hegde |
| Sanjay Bhat | Prakash Bhat |
| Smt. Tanuja Hegde | Prakash Hegde |
| Smt. Shashikala Hegde | N. K. Hegde |
| Ramana Bhat | |

***Co-opted Members :***
Chandrashekhar Joshi, Nagaraj Bhat

***Editorial***

# The Zest For Life



*On 10th March we were thrilled as Havyaka Welfare Trust, bestowed Karki Venkataramana Shastri Suri Award upon Smt.Mitra Venkatraj , a noted Kannada litterateur. For the last **18 years,** the Karki Suri Award is given every year to a Kannadiga who has achieved a feat in the field of literature, journalism and social service, in rotation. This Award Function has been very important for Havyaka Welfare Trust. Further the said function marked the beginning of the celebration of the **60th year** of the Havyaka Welfare Trust.*

*An Institution or a Trust has no age bar as it can run for centuries. Yet some period of time are like milestones where the members can introspect the journey and plan the future.*

*Age depicts different stages in an individual's life. It is natural to be excited on becoming an adult (becoming 18) as one is considered capable of taking decisions in life. Youthfulness is always coupled with dreams where one wants to fly and the sky is the limit. Tender age may be coupled with the inherent fear of not reaching the expectations of parents, relatives and more over one's own expectation. However, with the support of exuberating energy of the youth, they are all set to paint the canvas of their life.*

*The young are often told to set the goal of life and march towards it. Setting goals helps to visualise the journey, to remain focussed leading to professional growth. However, in the heart of heart, some may crib over not getting what they wanted in life like... they could not get into the course they wanted, get the job they wanted. Some might have not followed their passion as they might have not found it lucrative in terms of money. Although they might have tried and succeeded in loving their job, somewhere in their subconscious mind that passion might be alive. Finally, a time will come, at the age of 58 or 60 that they have to retire.*

*In reality, there may be retirement from job but not retirement from life till the last breath. Life gives another opportunity to everyone not only to follow their passion but also to discover their hidden talent. Exploring oneself can be more interesting than exploring the world. This phase of the life can also be very exciting.*

*Even for those who are self-employed the 60th year can be a wakeup call for introspection and to think about bringing positive change in life. In growing years, we take love and affection from our parents, grandparents, relatives, neighbors and from many more in our surroundings. 60th year marks maturity which suggests 'it is time to give back to the society'. The zest for life which we had at 18 should continue at 60 also.*

Amita S Bhagwat

e-mail : amitabhagwat@gmail.com

*PAGE DONATED BY :* ***HEGDE HOSPITAL, CHEMBUR,*** *COURTESY :* ***DR. DINESH HEGDE***

# *From The President's Desk*

Dear Friends,



I am addressing you with pleasure as we are all set to welcome Ugadi, the Hindu New Year. Our New Year is not just beginning of a New Samvatsara but also reminds us of the philosophy of life. By eating Bevu Bella, we pledge to take pleasure and pain equally in life. Our Dharma has always given importance to righteous behaviour. We also believe that 'Dharmo Rakshati Rakshitah' which also is the slogan of our Havyaka Welfare Trust.

We were very happy that Shri Karki Venkataramana Shastri Suri function which was held on 10th March was successful. This time the Award was bestowed upon Smt. Mitra Venkatraj for her outstanding contribution to Kannada literature. Smt. Mitra Venkatraj told that it was an honour to receive the Award in the name of great personality Shri Karki Venkataramana Shastri Suri and she was accepting it with all humility. She said it was also a motivation to work hard in the world of literature. The function was well attended. Shri Tonse Vijaykumar Shetty, well known Dramatist & Artist was the Chief Guest. He appreciated our Trust for giving Award in the name of Shri Karki Venkatramana Shastri Suri.

In the afternoon, we launched our 60th year (Shastyabdi) program and Dr. Suresh Rao, President of B.S.K.B Association was the Chief Guest. Thereafter a presentation was made about our Trust and constitution of various committees for conducting of the yearlong activities for the Diamond Jubilee celebration of our Trust. It was emphasized that our members should participate in various programs. An appeal was made to the members for their generous contributions towards Educational Aid, Medical Assistance, Havyaka Bhavana and towards the General Fund. It was also decided to apply to the Hon'ble Chief Minister for allotting a plot of land for construction of Havyaka Bhavana. Some of the members spontaneously assured of donations.

The Harikeerthane by Shri Kairabettu Vishwanath Bhat and his troupe was liked by all.

Our thanks to Shri Ramana Bhat, Committee Member for sponsoring the wall clock to be distributed to our members on the occasion of the 60th year.

I sincerely thank Shri Ramesh Bhat, Halkar for his generous donation of Rs. 2,00,000/- in the name of his wife Smt. Snehal to the Women Welfare Cell of our Trust for giving education aid. He has been whole heartedly donating year after year for educational aid.

We are not happy as our Dombivili Medical Centre is not doing good. We need to work out for increasing the medical activities. We have to also decide on using of the Dhyan Mandir at Dombivili as the existing tenant has expressed of vacating it in April end. I request the members to come out with valuable suggestions in this regard.

I wish you all a HAPPY UGADI.

With Regards,

**S. P. BHAGWAT**
**President**

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# ಮಾಸ ಮಹಾತ್ಮ್ಯ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

**ವಿಜಯ ದಶಮಿ :** ದೇಶಾಂತರಕ್ಕೆ ಹೋಗಲಿಚ್ಛಿಸುವವರು ಅಥವಾ ವಿಜಯ ಯಾತ್ರೆಗಾಗಿ ಹೊರಡುವ ರಾಜರು ಇತರ ಮುಹೂರ್ತಗಳನ್ನೇನೂ ಲಕ್ಷಿಸದೆ ಈ ದಿನ ವಿಜಯಮುಹೂರ್ತದಲ್ಲಿ ಹೊರಡಬಹುದು. ಈ ವಿಜಯಮುಹೂರ್ತವು ಎರಡು ಪ್ರಕಾರವಾಗಿದೆ. ಸಂಧ್ಯಾಕಾಲವು ಸ್ವಲ್ಪ ಮೀರಿ ಸ್ವಲ್ಪ ಸ್ವಲ್ಪ ನಕ್ಷತ್ರ ದರ್ಶನಕಾಲವಾಗಲಿ ಹಗಲಿನ ಹನ್ನೊಂದನೆಯ ಮುಹೂರ್ತ ಅಂದರೆ 20ರಿಂದ 22ಗಳಿಗೆಯೊಳಗಿನ ಕಾಲವಾಗಲಿ ವಿಜಯ ಮುಹೂರ್ತವೆನಿಸುವುದು. ಅಂತು ಅಪರಾಹ್ನ ಕಾಲದಲ್ಲಿ ದಶಮಿಯಿರಬೇಕು. ಶ್ರವಣನಕ್ಷತ್ರ ಯುಕ್ತವಾದರೆ ಉತ್ತಮವು. ತನ್ನ ಮನೆಯಲ್ಲಿ ಆನೆ, ಕುದುರೆ, ಛತ್ರಚಾಮರಾದಿಗಳಿದ್ದರೆ ಅವನ್ನೂ ಪೂಜಿಸಬೇಕು ಹಾಗೂ ಅಪರಾಹ್ನದಲ್ಲಿ ಊರ ಹೊರಗೆ ಈಶಾನ್ಯ ದಿಕ್ಕಿಗೆ ಹೋಗಿ ಅಪರಾಜಿತಾ ದೇವಿಯನ್ನೂ ಶಮೀವೃಕ್ಷವನ್ನೂ ಪೂಜಿಸಿ ಸೀಮೋಲ್ಲಂಘನ ಮಾಡಬೇಕು. ದೇಶಾಂತರಕ್ಕೆ ಹೋಗಲಿಚ್ಛಿಸುವವರು ಪ್ರಯಾಣ ಮಾಡಬೇಕು. ರಾಜರು ಶಮಿಯ ಸಮೀಪದಲ್ಲಿ ದಿಕ್ಪಾಲ, ವಾಸ್ತು ದೇವತೆಗಳನ್ನು ಪೂಜಿಸಿ ಶತ್ರುವಿನ ವಿಗ್ರಹವನ್ನು ಮಾಡಿಟ್ಟು ಅದನ್ನು ಶಸ್ತ್ರದಿಂದ ತುಂಡರಿಸಬೇಕು. ಹಾಗೂ ಮಂಗಲವಾದ್ಯ ಸಮೇತರಾಗಿ ಶಮಿಯ ಮೂಲದ ಹಸೀಮಣ್ಣನ್ನು ಅಕ್ಷತೆಯಿಂದ ಸಹಿತವಾಗಿ ತನ್ನ ಮನೆಗೆ ತರತಕ್ಕದ್ದು. (ಶಮಿಯ ಟೊಂಗೆಗಳನ್ನು ತರುವ ಪದ್ಧತಿಗೆ ವಿಧಿಯಿದ್ದದ್ದು ಕಂಡು ಬರುವುದಿಲ್ಲ.) ಸುವಾಸಿನಿಯರಿಂದ ನೀರಾಜನ ಮಾಡಿಸಿಕೊಂಡು ಗೃಹಪ್ರವೇಶ ಮಾಡಬೇಕು. ಇತ್ಯಾದಿ ವಿಧಿಯಿರುತ್ತದೆ.

ಇದಕ್ಕೆ 'ದಶ' ಅಂದರೆ ಹತ್ತನೇ ದಿನವೆಂಬರ್ಥದಲ್ಲಿ 'ದಸರಾ' ಎಂಬ ಹೆಸರು ಮಹಾರಾಷ್ಟ್ರಭಾಷೆಯಲ್ಲಿ ಬಂದಂತೆ ತೋರುತ್ತದೆ. ನವರಾತ್ರಿಯ ಘಟಸ್ಥಾಪನೆಯ ಕಾಲಕ್ಕೆ ಅದರ ಸಮೀಪ ನವಧಾನ್ಯಗಳನ್ನು ನೆನೆಯಿಟ್ಟು ಈ ದಿನ ಆ ಮೊಳಿಕೆವಡೆದ ಎಳೇ ಸಸಿಗಳನ್ನು ದೇವೀಮೂರ್ತಿಗೆ ಅರ್ಪಿಸಿ ತಾವೂ ಪ್ರಸಾದವಾಗಿ ಧರಿಸುವ ಸಾಂಪ್ರದಾಯವಿರುತ್ತದೆ. ಈ ದಿನ ದೇವಿಗೆ ಆಡುಕುರಿಗಳನ್ನು ಬಲಿಕೊಟ್ಟು ಅದನ್ನು ಗ್ರಾಮದ ಹೊರಗೆ ಹೂಳುವ ಸಾಂಪ್ರದಾಯವು ಕೆಲವು ಕಡೆಗಿರುತ್ತದೆ. ಇದರಿಂದ ಆ ಗ್ರಾಮಕ್ಕೆ ಮುಂದಿನ ಒಂದು ವರ್ಷವು ಸುಖಕರವಾಗುವುದೆಂದು ಅವರ ಭಾವನೆಯಿರುವುದಂತೆ. ಗ್ರಾಮದೇವತೆಯ ಉತ್ಸವದೊಂದಿಗೆ ಸೀಮೋಲ್ಲಂಘನ ಮಾಡಿ ಶಮೀ ಪೂಜನ ಮಾಡುವ ಹಾಗೂ ಶಮಿಯ ಎಲೆಗಳನ್ನು ಬಂಗಾರವೆಂದು ಪರಸ್ಪರರಲ್ಲಿ ಕೊಟ್ಟುಕೊಳ್ಳುವ ರೂಢಿಯುಂಟು. ದೇವಾಲಯಗಳಲ್ಲಿ ದೀಪೋತ್ಸವಾದಿಗಳು ನಡೆಯುವವು. ಮರಾಠಾ, ರಜಪೂತ ಮುಂತಾದ ಕ್ಷತ್ರಿಯವರ್ಗದ ಸರದಾರರೂ ರಾಜರೂ ಈ ದಿನ ಕುದುರೆ ಹಾಗೂ ಶಸ್ತ್ರಗಳ ಪೂಜೆಮಾಡುವರು. ಮೈಸೂರು, ಬಡೋದಾ ಮುಂತಾದ ಕೆಲವು ಸಂಸ್ಥಾನಗಳಲ್ಲಿ ಈ ಉತ್ಸವವು ಒಳ್ಳೇ ವೈಭವದಿಂದ ನಡೆಯುತ್ತಿದ್ದು ಈ ದಿನ ದರಬಾರ ನೆರೆಯಿಸುವರು. ರಜಪೂತ ಹಾಗೂ ಮಹಾರಾಷ್ಟ್ರರ ರಾಜ್ಯವು ನಡೆಯುತ್ತಿದ್ದಾಗ ಅವರು ಈ ಮುಹೂರ್ತದಲ್ಲೇ ಪರರಾಜರ ಮೇಲೆ ದಾಳಿ ಮಾಡುತ್ತಿದ್ದರು. ಪೇಶ್ವೆಯವರು ಈ ದಿನ ದರಬಾರ ನಡೆಸಿ ತಮ್ಮ ಮಾಂಡಲೀಕ ಅರಸರಿಗೆ ಉಡುಗೊರೆಗಳನ್ನು ಕೊಡುತ್ತಿದ್ದರು.

ಶ್ರೀ ರಾಮಚಂದ್ರನು ಈ ಮುಹೂರ್ತದಲ್ಲೇ ಪ್ರಯಾಣ ಮಾಡಿ ಲಂಕೆಯನ್ನು ಮುತ್ತಿ ವಿಜಯಿಯಾದನು. ಇದರಿಂದ ರಾಮಲೀಲಾ ಎಂಬ ಉತ್ಸವವು ಉತ್ತರ ಹಿಂದುಸ್ಥಾನದಲ್ಲಿ ನಡೆಯುತ್ತದೆ. ಪಾಂಡವರು



ಅಜ್ಞಾತವಾಸಕ್ಕಾಗಿ ವಿರಾಟನಗರದಲ್ಲಿ ವಾಸವಾಗಿರುವ ಮೊದಲು ತಮ್ಮ ಆಯುಧಗಳನ್ನೆಲ್ಲ ಊರ ಹೊರಗಿನ ಶಮೀವೃಕ್ಷದಲ್ಲಿ ಕಟ್ಟಿಟ್ಟಿದ್ದರು. ಮುಂದೆ ಕೌರವರು ಗೋಗ್ರಹಣ ಮಾಡಿದಾಗ ಉತ್ತರಕುಮಾರನಿಂದ ಸಹಿತನಾಗಿ ಅರ್ಜುನನು ಹೊರಟಿದ್ದೂ ಆ ಶಮೀವೃಕ್ಷವನ್ನೂ, ಆಯುಧ ಗಳನ್ನೂ ಪೂಜಿಸಿ ಆ ಆಯುಧಗಳಿಂದ ಅರ್ಜುನನು ಕೌರವರನ್ನು ಗೆದ್ದು ಗೋವುಗಳನ್ನು ಬಿಡಿಸಿದ್ದೂ ಈ ವಿಜಯಾದಶಮಿಯ ದಿನವೇ ಎಂದು ಹೇಳುತ್ತಾರೆ. ಇದರಿಂದಲೇ ಶಮೀಪೂಜೆಯೂ, ಶಸ್ತ್ರಗಳ ಪೂಜೆಯೂ ಪ್ರಚಾರದಲ್ಲಿ ಬಂದಿರಬೇಕು. ಶ್ರೀಕೃಷ್ಣನು 'ಕಾಲಿಯ' ಮರ್ದನಮಾಡಿದ ದಿನವಾದರೂ ಇದೇ ದಶಮಿಯೆಂದು ತಿಳಿಯಲ್ಪಡುವುದರಿಂದ ಮಹಾರಾಷ್ಟ್ರದ ಗವಳೀ ಜನರಲ್ಲಿ ಶ್ರೀಕೃಷ್ಣಮೂರ್ತಿಯ ಉತ್ಸವವು ನಡೆಯುವುದು. ಈ ದಿನ ತಮ್ಮ ಗದ್ದೆಯೊಳಗಿನ ಭತ್ತದ ಪೈರನ್ನು ಪೂಜಿಸಿ ಕದುರು ತಂದು ಮನೆಯ ವಾಸ್ತುವಿನ ಮೇಲ್ಭಾಗಕ್ಕೂ ಬೇರೆ ಬೇರೆ ಸಾಮಾನುಗಳಿಗೂ ಕಟ್ಟುವ ರೂಢಿಯೂ ಉಂಟು. ಇದಕ್ಕೆ ಹೊಸ್ತಿನ ಹಬ್ಬವೆನ್ನುವರು. ಹಸ್ತಾ ನಕ್ಷತ್ರದಲ್ಲಿ ಈ ಹಬ್ಬ ಮಾಡುವ ಸಾಂಪ್ರದಾಯವೂ ಕೆಲವರಲ್ಲುಂಟು. ಮಳೆಗಾಲವು ತೀರಿದ್ದರಿಂದ ಪ್ರಯಾಣ ಮಾಡುವವರಿಗೆ ಇದೊಂದು ಶುಭಮುಹೂರ್ತವಾಗಿರುವಂತೆ ಒಕ್ಕಲಿಗರಿಗೆ ಭತ್ತದ ಪೈರು ಹಣ್ಣಾಗುತ್ತ ಬಂದದ್ದನ್ನು ನೋಡುವ ಸಂತೋಷದ ಹಬ್ಬವೂ ಆಗಿರಬೇಕು. ಇಲ್ಲಿಂದ ಮುಂದೆ ಭತ್ತದ ಪೈರು ಕೊಯ್ಯಹತ್ತುವರು. ಇದರಿಂದ ಈ ಹಬ್ಬವು ಕೃಷಿಜೀವಿಗಳ ಹಬ್ಬವೆನ್ನಲು ಅಡ್ಡಿಯಿಲ್ಲ. ಅಂದಮೇಲೆ ಕೃಷೀಪ್ರಧಾನವಾದ ನಮ್ಮ ದೇಶಕ್ಕೆ ಇದು ಮಹತ್ವದ ಹಬ್ಬವಾದದ್ದು ಯುಕ್ತವೇ ಸರಿ.

ಕಾರ್ತಿಕ ವ್ರತಗಳು ಈ ದಶಮಿ ಅಥವಾ ಏಕಾದಶೀ ಇಲ್ಲವೆ ಪೌರ್ಣಿಮೆಯಿಂದಲೇ ಪ್ರಾರಂಭವಾಗುತ್ತವೆ. ಅವುಗಳಲ್ಲಿ ಕಾರ್ತಿಕಸ್ನಾನವು ಒಂದಾಗಿದೆ. ಈ ಸ್ನಾನಕಾಲಕ್ಕೆ ಕಾಶೀಖಂಡದಲ್ಲಿರುವ ಅಭಿಲಾಷಾಷ್ಟಕವನ್ನು ಪುತ್ರಕಾಮಿಯು ಹೇಳಬೇಕು. ತುಲಸೀಕುಡಿಗಳಿಂದಲೂ, ಧಾತ್ರೀಪತ್ರಫಲ ಗಳಿಂದಲೂ ಹರಿಯನ್ನು ಪೂಜಿಸುವುದು; ಧಾತ್ರೀ(ನೆಲ್ಲಿ) ಮರದ ಬುಡದಲ್ಲಿ ಬ್ರಾಹ್ಮಣಭೋಜನ ಅಂದರೆ ವನಭೋಜನ ಮಾಡುವುದು. ಅರುಣೋದಯ ಕಾಲದಲ್ಲಿ ಜಾಗರ ವಿಧಿಯೆಂದು ಶಂಖವನ್ನು ಊದಿ, ಪುರಾಣ ಶ್ರವಣ ಮಾಡುವುದು, ಆಕಾಶ ದೀಪಗಳನ್ನು ಹಚ್ಚುವುದು ಇತ್ಯಾದಿ ವೃತಗಳು ಉಕ್ತವಾಗಿವೆ.

ಅಶ್ವಿನ ಶುದ್ಧ 15 ದಿನ ಕೋಜಾಗರೀ ವ್ರತವನ್ನು ಆಚರಿಸುವುದರಿಂದ ಐಶ್ವರ್ಯ ಪ್ರಾಪ್ತಿಯಾಗುವುದೆಂದು ಹೇಳಿದೆ. ಇದಕ್ಕೆ ಕೌಮುದೀಜಾಗರ ವ್ರತವೆಂದೂ ಹೆಸರಿದೆ. ಈ ದಿನ ಉಪವಾಸಮಾಡಿ ರಾತ್ರಿ ಲಕ್ಷ್ಮಿಯನ್ನೂ, ಐರಾವತ ಸಹಿತ ಇಂದ್ರನನ್ನೂ ಪೂಜಿಸಿ ಜಾಗರಣವಾಗಿದ್ದು ತೆಂಗಿನ ಕಾಯಿಯ ನೀರನ್ನು ಕುಡಿದು ದ್ಯೂತ, ನೃತ್ಯ ಗೀತಗಳಿಂದ ರಾತ್ರಿಯನ್ನು ಕಳೆಯಬೇಕು. ಈ ದಿನ ರಾತ್ರಿ ಲಕ್ಷ್ಮಿಯು ವಿಷ್ಣುವಿನಿಂದ ಸಹಿತಳಾಗಿ ಲೋಕದಲ್ಲೆಲ್ಲ ತಿರುಗಾಡಿ ಜಾಗರಣವಾಗಿದ್ದವರಿಗೆ ಐಶ್ವರ್ಯ ಕೊಡುವಳು. ಈ ವ್ರತವಿಧಾನವನ್ನೂ ಕಥೆಯನ್ನೂ ವ್ರತರಾಜದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ; ಈ ವ್ರತವು ಮಹಾರಾಷ್ಟ್ರದಲ್ಲೂ ಉತ್ತರ ಹಿಂದುಸ್ಥಾನದಲ್ಲೂ ಪ್ರಚಾರದಲ್ಲಿರುತ್ತದೆ.

*(ಮುಂದುವರಿಯುವುದು)*

*PAGE DONATED BY :* ***AKADAS & FAMILY***

# ಮುಂಬೈ ಕನ್ನಡ ಕವಿಗಳು ಅರವಿಂದ ನಾಡಕರ್ಣಿ

✍ ಡಾ. ಶೈಲಜಾ ಹೆಗಡೆ, ಮುಂಬಯಿ

ಹೊಸಗನ್ನಡ ಕಾವ್ಯಕ್ಷೇತ್ರದಲ್ಲಿ ಗಮನ ಸೆಳೆಯುವ ಕವಿಗಳಲ್ಲಿ ಅರವಿಂದ ನಾಡಕರ್ಣಿಯವರು ಪ್ರಮುಖರು. ತಮ್ಮ ಕಾವ್ಯದಲ್ಲಿ ನಗರ ಜೀವನದ ವಾಸ್ತವಿಕತೆಯನ್ನು ಮುಕ್ತವಾಗಿ ತೆರೆದಿಟ್ಟ ಇವರನ್ನು ನಗರಪ್ರಜ್ಞೆಯ ಕವಿ ಎಂದೇ ಸಂಬೋಧಿಸುತ್ತಾರೆ. ಅರವಿಂದ ನಾಡಕರ್ಣಿಯವರು ಜನಿಸಿದ್ದು, (1931) ಉತ್ತರಕನ್ನಡ ಜಿಲ್ಲೆಯ ಕುಮಟೆಯಲ್ಲಿ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಹನೇಹಳ್ಳಿ-ಬಂಕಿಕೊಡ್ಲದಲ್ಲಿ ಆಯಿತು. ಕುಮಟೆಯಲ್ಲಿಯೇ ಮ್ಯಾಟ್ರಿಕ್ ಮುಗಿಸಿದರು.

ಅರವಿಂದರ ಮುಂದಿನ ವಿದ್ಯಾಭ್ಯಾಸ ಮುಂಬೈಯಲ್ಲಿ ನಡೆಯಿತು. ಸಂಸ್ಕೃತ ಎಂ.ಎ, ವಕೀಲಿ ಪದವಿಗಳನ್ನು ಪಡೆದ ಇವರು 1954ರಿಂದ ಮುಂಬಯಿಯ ಆದಾಯಕರ ಇಲಾಖೆಯಲ್ಲಿ ಆಫೀಸರರಾಗಿ ದುಡಿದು, ನಂತರ ಕೆಲವು ಕಾಲ ಸ್ವತಂತ್ರ ಆದಾಯಕರ ಸಲಹೆಗಾರರಾಗಿ ಸೇವೆಗೈದು 1985ರಲ್ಲಿ ನಿವೃತ್ತಿ ಹೊಂದಿದರು. ಮುಂಬೈಯಲ್ಲಿ 'ಸಾಹಿತ್ಯಕೂಟ'ವನ್ನು ಕಟ್ಟಿ, ಅದರ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. 1984 ರಿಂದ 88ರವರೆಗೆ ಪ್ರಜಾವಾಣಿಗೆ ಕವಿತಾ ವಿಮರ್ಶಕರಾಗಿಯೂ, 'ಸೃಜನವೇದಿ' ಚಾತುರ್ಮಾಸಿಕದ ಸಹ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ ಶ್ರೇಯಸ್ಸು ಇವರದು.

ಅರವಿಂದ ನಾಡಕರ್ಣಿ ಅವರು ಹುಟ್ಟಿದ್ದು, ಬೆಳೆದದ್ದು ಗ್ರಾಮಾಂತರ ಪರಿಸರದಲ್ಲಿ. ಹನೇಹಳ್ಳಿಯ ಪ್ರಕೃತಿ ರಮ್ಯ ಪರಿಸರ, ಅಲ್ಲಿಯ ಹಚ್ಚಹಸಿರು ಗಿಡಬಳ್ಳಿಗಳು, ಹರಿವ ಹೊಳೆ ಹಳ್ಳಗಳು, ಭೋರ್ಗರೆವ ಕಡಲು, ಗುಡ್ಡ ಬೆಟ್ಟಗಳು, ವನೋದ್ಯಾನಗಳು ಸಹಜ ಸೌಂದರ್ಯದಿಂದ ತುಂಬಿ ತುಳುಕುತ್ತಿದ್ದವು. ಅಸಂಕೀರ್ಣ ಬದುಕಿನ ಸಂಕೇತವಾದ ಈ ಪ್ರಾಕೃತಿಕ ಸಂಪತ್ತು ನಾಡಕರ್ಣಿಯವರ ಕವಿ ಮನಸ್ಸನ್ನು ಆಕರ್ಷಿಸಿದ್ದವು. ಆದರೆ ವೃತ್ತಿ ಜೀವನಕ್ಕಾಗಿ ಅವರು ಆಯ್ದುಕೊಂಡದ್ದು ಅತ್ಯಂತ ಸಂಕೀರ್ಣವಾದ ಮುಂಬೈ ನಗರ ಜೀವನ, ನಂತರ ಅದನ್ನೇ ತಮ್ಮ ಕಾವ್ಯವಸ್ತುವನ್ನಾಗಿಸಿ ಕೊಂಡದ್ದು ರೋಚಕವೆನಿಸುತ್ತದೆ. ನಗರಾಯಣವನ್ನೇ ಕಾವ್ಯದ ಕೇಂದ್ರ ವಸ್ತುವನ್ನಾಗಿಸಿಕೊಂಡ ಅರವಿಂದ ನಾಡಕರ್ಣಿಯವರು ಆಧುನಿಕ ಕವಿಗಳಲ್ಲಿ ಅಗ್ರಗಣ್ಯರು. ಇವರ ಕಾವ್ಯದಲ್ಲಿ ನಾಟಕೀಯ ತಂತ್ರವನ್ನು ಗುರುತಿಸಬಹುದು. ನವ್ಯಕಾವ್ಯ ಪರಂಪರೆಯ ಕವಿಯೆಂದು ಖ್ಯಾತರಾದ ಇವರ ಮುಕ್ತಛಂದ ಕಾವ್ಯವು ಕೇವಲ ಶುಷ್ಕ ಕಾವ್ಯವಾಗಿರದೆ, ಹಲವು ಅಲಂಕಾರಗಳನ್ನು, ಪ್ರತಿಮೆಗಳನ್ನು ಒಳಗೊಂಡಿದೆ. 1962ರಲ್ಲಿ ರಚಿತವಾದ ಕಾವ್ಯಾರ್ಪಣದಿಂದ ಆರಂಭಿಸಿ, ಮಾಯಾವಿ, ಜರಾಸಂಧ, ನಾ ಭಾರತೀಕುಮಾರ, ನಗರಾಯಣ, ಆತ್ಮಭಾರತ, ಅಜ್ಞಾತ, ಜಂಕ್ಷನ್ ಕವಿತೆಗಳು, ಸಲೂನಿನಲ್ಲಿ ಹುಡುಗ, ಎರಡು ಧ್ರುವ ಮೊದಲಾದ ಕವನ ಸಂಕಲನಗಳನ್ನು ಇವರು ರಚಿಸಿದ್ದಾರೆ. ಅರವಿಂದ ನಾಡಕರ್ಣಿಯವರ ಕಾವ್ಯದ ಮೇಲೆ ಬೀರಿದ ಟಿ.ಎಸ್. ಎಲಿಯೆಟ್, ಫ್ರಾಯ್ಡ್, ಯೂಂಗ್ ಮೊದಲಾದ ಪಾಶ್ಚಾತ್ಯ ಕವಿಗಳ ಪ್ರಭಾವ ಗಣನೀಯವಾದುದು. ಆ ಕುರಿತು ಜಿ.ಎಸ್. ಆಮೂರರು, "ಪಾಶ್ಚಾತ್ಯ ಕವಿಗಳ ಪ್ರಭಾವಕ್ಕೆ ಒಳಗಾದರೂ ಇವರ ಕಾವ್ಯ ಎರವಲು ತಂದ ಮಾಲಾಗಿರದೆ, ಅಧಿಕೃತವಾಗಿ ವಸ್ತುನಿಷ್ಠತೆ ಮತ್ತು ಆತ್ಮನಿಷ್ಠತೆ ಎರಡನ್ನೂ ಒಟ್ಟಿಗೆ ಸಾಧಿಸುವಂತಾಗಿದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಾಡಕರ್ಣಿಯವರ ಕಾವ್ಯದಲ್ಲಿ ಪುರಾಣ ಪ್ರತಿಮೆಗಳ ಬಳಕೆ ಹೇರಳವಾಗಿರುವುದು ಕಂಡುಬರುತ್ತದೆ. ಇದಕ್ಕೆ ದೃಷ್ಟಾಂತವಾಗಿ, ಜೀವನದ ಸಾಮಾನ್ಯ ಅವಶ್ಯಕತೆಗಳನ್ನೂ ಪೂರೈಸಿಕೊಳ್ಳಲಾಗದ ನಗರಜೀವಿಗಳ ಕುರಿತ ಕವಿತೆಯ ಸಾಲುಗಳನ್ನು ಆಯ್ದುಕೊಳ್ಳಬಹುದು.



ಎಷ್ಟೋ ಸಲ ಒದರಿದ್ದ  
ಗಾಲಿಯಡಿ ಕರ್ಣ ಫೀಳಿಟ್ಟಂತೆ-ನಾ ಪಡೆದೀ  
ಆತ್ಮದ ಕಿಂಚಿತ್ ಬೀಜ  
ಪೋಷಿಸಿ ಬೆಳೆಸಲಾದರೂ ಬಿಡಿ

ಯುದ್ಧರಂಗದಲ್ಲಿ ರಥಹೂಳಿ ಮಹಾರಥಿ ಕರ್ಣ ತತ್ತರಿಸಿದಂತೆ, ನಗರ ಜೀವನದಲ್ಲಿ ಸಿಕ್ಕಿ ತೊಳಲಾಡುವ ಮಾನವ ತನ್ನ ಕುಟುಂಬದ ಕುಡಿಯನ್ನೂ ಉಳಿಸಿಕೊಳ್ಳಲಾರದ ಸ್ಥಿತಿಗೆ ತಲುಪುತ್ತಾನೆ. ಸುತ್ತಮುತ್ತಲಿನ ವಿನಾಶಕಾರಿ ವಾತಾವರಣ ಆತನ ಬದುಕುವ ಸ್ವಾತಂತ್ರ್ಯವನ್ನೇ ಕಸಿದುಕೊಳ್ಳುತ್ತದೆ ಎಂದು ಕವಿ ಮೇಲಿನ ಸಾಲುಗಳಲ್ಲಿ ಬಣ್ಣಿಸಿದ್ದಾರೆ. ಪೌರಾಣಿಕ ಕಥೆಗಳನ್ನು ಇಂದಿನ ಸಂದರ್ಭಗಳಿಗೆ ಹೋಲಿಸಿ ವಿವರಿಸುವ ಕವಿಯ ಕಾವ್ಯಕುಶಲತೆ ಅನ್ಯಾದೃಶವಾದುದು. ಮಹಾಭಾರತದ ಯುದ್ಧ ಕ್ಷೇತ್ರದಲ್ಲಿ ಕುರುಪಿತಾಮಹ ಗಂಗಾಪುತ್ರ ಗಾಂಗೇಯ ಶರಶಯ್ಯೆಯಲ್ಲಿ ಮಲಗಿ, ನೀರಿಗಾಗಿ ಪರಿತಪಿಸಿದಾಗ ಅರ್ಜುನನು ತನ್ನ ಪರಾಕ್ರಮದಿಂದ ಭೂಮಿಯನ್ನು ಭೇದಿಸಿ, ಆತನಿಗೆ ನೀರು ದೊರೆಯುವಂತೆ ಮಾಡುತ್ತಾನೆ. ಆದರೆ, ಆಧುನಿಕ ಕಾಲದಲ್ಲಿ ನಗರಗಳಲ್ಲಿ ನೀರಿಲ್ಲದ ಸಂದರ್ಭದಲ್ಲಿ ಯಾರೂ ಸಹಾಯಕ್ಕೆ ಬರಲಾರರು ಎಂಬುದನ್ನು ಕವಿ ನಾಡಕರ್ಣಿಯವರು ಹಲವು ಪ್ರತಿಮೆಗಳ ಮೂಲಕ ವರ್ಣಿಸಿದ್ದಾರೆ. ಇಂತಹ ವಿಶಿಷ್ಟ ಉಲ್ಲೇಖಗಳ ಬಳಕೆಯನ್ನು ಸಂಸ್ಕೃತ ಸಾಹಿತ್ಯದಲ್ಲಿ ಉಲ್ಲೇಖಾಲಂಕಾರವೆಂದು ಹೆಸರಿಸುತ್ತಾರೆ. ಕವಿತೆಯ ಸಾಲುಗಳು ಇಂತಿವೆ,

'ಒಮ್ಮಿಂದೊಮ್ಮೆ ನೀರು ನೀರು ಎಂದ  
ಶರಶಯ್ಯೆಗೆ ಬಿದ್ದ ಗಾಂಗೇಯನಂತೆ  
ಇಲ್ಲಿ ನೀರಿಲ್ಲದ ನಲ್ಲಿ  
ಗಂಗಾಬಲಗಿಂಡಿ ಎಂದೋ ಖಾಲಿ  
ಅಲ್ಲದೆ  
ಕೂಗು ಕೇಳಿದ ಒಬ್ಬ ಅಪಾರ್ಥನೂ ಇಲ್ಲ

ಇಲ್ಲಿ 'ಅಪಾರ್ಥ' ಎಂಬ ಶಬ್ದದ ಬಳಕೆ ವೈಶಿಷ್ಟ್ಯಪೂರ್ಣವಾಗಿದೆ. ಪಾರ್ಥರಲ್ಲದವರು ಅಪಾರ್ಥರು, ಇನ್ನೊಂದರ್ಥದಲ್ಲಿ ಸಾಮಾನ್ಯ ಜನರ ಕಷ್ಟಗಳನ್ನು ಅರ್ಥಮಾಡಿಕೊಳ್ಳದವರು ಎಂದೂ ಅಪಾರ್ಥ ಶಬ್ದವನ್ನು ಅರ್ಥೈಸಬಹುದು. ವಿಷಮ ಸಮಯದಲ್ಲಿ ಒದಗಿ ಬರಲು ಇಂದು ಮೂರ್ಲೋಕ ವಿಜಯಿಯೆನಿಸಿದ ಪಾರ್ಥನೂ ಇಲ್ಲ, ಅಂತೆಯೇ, ಯಾವುದೇ ಬಿರುದು ಬಾವಲಿಗಳಿಲ್ಲದ ಅಪಾರ್ಥನೂ ಇಲ್ಲ ಎನ್ನುವ ಕವಿಯ ವ್ಯಂಗ್ಯೋಕ್ತಿ; ನಗರ ಜೀವನದಲ್ಲುಂಟಾಗುವ ಆಕಸ್ಮಿಕ ಬದಲಾವಣೆಗಳ ವಸ್ತುಸ್ಥಿತಿಯನ್ನು ಬಯಲಿಗೆಳೆದಿದೆ. "ನಾಡಕರ್ಣಿಯವರು ತಮ್ಮ ಕಾವ್ಯದಲ್ಲಿ ಪುರಾಣ ಪ್ರತಿಮೆಗಳನ್ನು ಮುಖ್ಯವಾಗಿ ಎರಡು ರೀತಿಗಳಲ್ಲಿ ಬಳಸುತ್ತಾರೆ- ವ್ಯಂಗ್ಯ ಸಾದೃಶ್ಯಕ್ಕಾಗಿ ಹಾಗೂ ಪ್ರವೇಶ-ರೂಪಕವಾಗಿ. ಇವುಗಳಲ್ಲಿ ವ್ಯಂಗ್ಯ ಸಾದೃಶ್ಯವೇ ಹೆಚ್ಚು. ರಾಮಾಯಣದ ರಾಮ ಆಧುನಿಕ ಯುಗದ ರಾಮರಾಯನಾಗುತ್ತಾನೆ, ಮಹಾಭಾರತದ ಕೃಷ್ಣ ನಿವೃತ್ತ ಕಾರಕೂನ ಕೃಷ್ಣಪ್ಪನಾಗುತ್ತಾನೆ. ಭೀಮ ನೋಟಿನ ಗದೆ ತಿರುಗಿಸುತ್ತಾನೆ, ಅರ್ಜುನ ಮಧ್ಯಮ ವರ್ಗದ ಗಿರಾಕಿಯಾಗಿ ಡಿಸ್ಕೌಂಟುಗಳನ್ನು ಅರಸುತ್ತಾನೆ. ವ್ಯಂಗ್ಯ ಸಾದೃಶ್ಯಕ್ಕಿಂತ ಪ್ರಮಾಣದಲ್ಲಿ ಕಡಿಮೆಯಿದ್ದರೂ ಪ್ರತೀಕ-ರೂಪಕಗಳ ರೀತಿಯೇ ಹೆಚ್ಚು ಸತ್ವಪೂರ್ಣವಾಗಿದೆ. ಇವುಗಳಲ್ಲಿ ಮೌಲ್ಯಗಳ ತೀವ್ರ ಹುಡುಕಾಟವಿದೆ, ಪರಂಪರೆಯೊಡನೆ ಎದೆಹಾಲಿನ ಸಂಬಂಧವಿದೆ. ಲೋಪಾಮುದ್ರೆ, ಶುನಶ್ಶೇಪ ಸಲ್ಲಾಪ, ಮಾಯೆ, ಧ್ರುವಧ್ಯಾಸದಂತಹ ಕವನಗಳು ನಾಡಕರ್ಣಿಯವರ ಕಾವ್ಯದ ಏಕತಾನತೆಯಿಂದ ಸಿಡಿದು ನಿಲ್ಲುವುದು ಇದೇ ಕಾರಣಕ್ಕಾಗಿ. ಭವಾನಿ, ದ್ವೈಪಾಯನ, ಪುಂಸವನದಂತಹ ಕವನಗಳಲ್ಲಿ ಆಧುನಿಕ ವಸ್ತುವನ್ನು ಪುರಾಣದ ಮಟ್ಟಕ್ಕೆ ಏರಿಸಲಾಗಿದೆ" ಎಂಬ ಎಚ್. ಆರ್. ಅಮರನಾಥ ಅವರ ನುಡಿಗಳು ಯಥಾರ್ಥವಾಗಿವೆ. ❍

*PAGE DONATED BY : **SHRI N. R. HEGDE, DOMBIVLI***

# ಜೀವ ಜಗತ್ತಿಗೆ ಸವಾಲಾಗಿದೆ ಜಲ ಸಮಸ್ಯೆ

✍ ಎಸ್. ಜಿ. ಹೆಗಡೆ

***ಜಗತ್ತಿನ ಸುಮಾರು 18 ಪ್ರತಿಶತದಷ್ಟು ಜನಸಂಖ್ಯೆಯಿರುವ ನಮ್ಮಲ್ಲಿ ಜಗತ್ತಿನ 4 ಪ್ರತಿಶತ ನೀರಿನ ಮೂಲವಷ್ಟೇ ಇರುವುದು ಅಸಾಮಾನ್ಯ ಸ್ಥಿತಿಗೆ ಕಾರಣ. ಮಾನ್ಸೂನ್ ಮಳೆಯನ್ನು ಅವಲಂಬಿಸಿರುವ ನಮ್ಮಲ್ಲಿ ಅದರ ಅನಿಶ್ಚಿತತೆಯಿಂದಾಗಿ ನೀರಿನ ಬರದ ಜತೆಗೆ ನೆರೆ ಹಾವಳಿಯೂ ಒದಗುತ್ತಿದೆ.***

**Thousands have lived without love, not one without water - W. H. Auden**

ಪ್ರೀತಿಯನ್ನು ಕಳೆದುಕೊಂಡ ಪ್ರಾಣಿಗಳು ಬದುಕುವ ಬಗೆಯನ್ನು ಕಂಡುಕೊಳ್ಳುತ್ತವೆ, ಕಂಡುಕೊಳ್ಳಲೇಬೇಕು. ನೀರಿಲ್ಲದೆ ಬದುಕಿಲ್ಲ. ಜೀವಸೃಷ್ಟಿಯೂ ಆಗುವುದಿಲ್ಲ. ಆಕಾಶದಲ್ಲಿರುವ ಮಿಕ್ಕ ಗ್ರಹ ಉಪಗ್ರಹಗಳಲ್ಲಿ 'ಜೀವ'ದ ಕುರುಹು ಕಂಡಿರುವ ನಿದರ್ಶನಗಳಿಲ್ಲ. ಏಕೆಂದರೆ ಎಲ್ಲೂ ನೀರೇ ಸಿಕ್ಕಿಲ್ಲ. ಜೀವದ ಕುರುಹಿಗಿಂತ ಮೊದಲು ಹವೆಯಲ್ಲಿ ನೀರಿನ ಆರ್ದ್ರತೆಯ ಅಂಶವಿದೆಯೇ ಎಂಬುದು ವೈಜ್ಞಾನಿಕ ಚರ್ಚಾ ವಿಷಯದ ಮೂಲವಾಗುತ್ತಿದೆ. ಮಿಕ್ಕ ಆಕಾಶ ಕಾಯಗಳಲ್ಲಿ ಎಲ್ಲಾದರೂ ನೀರು ಸಿಕ್ಕಿದಿದ್ದರೆ ಭೂಮಿಯ ಜನಸಂಖ್ಯೆಯನ್ನು ವಿತರಣೆ ಮಾಡಿಕೊಳ್ಳಬಹುದಿತ್ತು. ಅಲ್ಲಿಗೂ ಇಲ್ಲಿಗೂ ನಂಟು ಬಿಗಿಯಬಹುದಿತ್ತು. ಅವೆಲ್ಲ ಬರೀ ಕಾಲ್ಪನಿಕ. ವಸ್ತುಸ್ಥಿತಿಯೆಂದರೆ ನಮ್ಮ ಗ್ರಹವೊಂದೇ ನೀರು ಹೊಂದಿರುವುದು, ನೀರಿನ ವಿಚಾರದಲ್ಲಿ ನಮಗೆ ನಾವೇ ರಾಜರು.

ಭೂಮಿಯ ಸುಮಾರು 71 ಪ್ರತಿಶತ ಭಾಗವನ್ನು ನೀರು ಆವರಿಸಿಕೊಂಡಿದೆ. ನಿಜ. ಆದರೆ ಉಪಯೋಗಿಸಬಲ್ಲ ನೀರಿನ ಕೊರತೆಯು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಅದರಲ್ಲೂ ಜಗತ್ತಿನ ಉಷ್ಣವಲಯದ ಭಾಗದಲ್ಲಿರುವ ನಮ್ಮ ದೇಶದಲ್ಲಿ ಈ ಕೊರತೆ ತೀವ್ರವಾಗಿದೆ. ಕಳೆದ ಮಾರ್ಚ್‌ನಲ್ಲಿ ಜಗತ್ತಿನ ನೀರಿನ ಸ್ಥಿತಿಯ ಕುರಿತಾದ ವರದಿಯೊಂದನ್ನು ಯುನೆಸ್ಕೊ ಪ್ರಕಟಿಸಿತ್ತು. ಅದರ ಪ್ರಕಾರ ಜಗತ್ತಿನ ಪಟ್ಟಣಗಳ ಪೈಕಿ ಅರ್ಧದಷ್ಟರಲ್ಲಿ ನೆಲೆಸಿರುವ ಸುಮಾರು 240 ಕೋಟಿ ಜನರು 2050ರ ಅವಧಿಯೊಳಗೆ ನೀರಿನ ಕೊರತೆಯನ್ನು ಅನುಭವಿಸಲಿದ್ದಾರೆ. ನೀರಿನ ಸಮಸ್ಯೆ ಎದುರಿಸುವ ಸುಮಾರು 80 ಪ್ರತಿಶತ ಜನರು ಏಷ್ಯಾ ಖಂಡದಲ್ಲಿ ಅದರಲ್ಲೂ ಚೀನಾ, ಭಾರತ ಮತ್ತು ಪಾಕಿಸ್ತಾನದಲ್ಲಿ ನೆಲೆಸಿರುವವರಾಗಿರುತ್ತಾರೆ.

ನಮ್ಮ ದೇಶವಿರುವುದು ಭೂಗೋಳದ ಉಷ್ಣವಲಯದಲ್ಲಿ. ಜಗತ್ತಿನ ಸುಮಾರು ಹದಿನೆಂಟು ಪ್ರತಿಶತದಷ್ಟು ಜನಸಂಖ್ಯೆಯಿರುವ ನಮ್ಮಲ್ಲಿ, ಜಗತ್ತಿನ ನಾಲ್ಕು ಪ್ರತಿಶತ ನೀರಿನ ಮೂಲವಷ್ಟೇ ಇರುವುದು ಅಸಾಮಾನ್ಯ ಸ್ಥಿತಿಗೆ ಕಾರಣ. ಮುಖ್ಯವಾಗಿ ಮಾನ್ಸೂನ್ ಮಳೆಯನ್ನು ಅವಲಂಬಿಸಿರುವ ನಮ್ಮಲ್ಲಿ ಅನಿಶ್ಚಿತ, ಅನಿಯಮಿತ ಮಳೆಯು ನೀರಿನ ಕೊರತೆಯ ಜತೆಗೆ ನೆರೆಹಾವಳಿ ಮತ್ತು ಬರಗಾಲವನ್ನೂ ತಂದೊಡ್ಡುತ್ತಿದೆ. ಭೂಮಿಯಾಳದಲ್ಲಿನ ನೀರಿನ ಶೇಖರಣೆಯು ಗ್ರಾಮೀಣ ಭಾರತದ 80 ಪ್ರತಿಶತ ಮತ್ತು ಪಟ್ಟಣಗಳ 50 ಪ್ರತಿಶತ ಭಾಗಕ್ಕೆ ಕುಡಿಯುವ ನೀರನ್ನು ಪೂರೈಸುತ್ತಿದೆ ಅಷ್ಟೇ. ವಿಶ್ವಬ್ಯಾಂಕ್ ಹೇಳಿದಂತೆ ಅಮೇರಿಕ ಮತ್ತು ಚೀನಾ ಎರಡೂ ಸೇರಿ ತೆಗೆಯುವ ನೀರಿಗಿಂತ ಹೆಚ್ಚಿನ ಪ್ರಮಾಣದ ನೀರನ್ನು ಭಾರತವು ಭೂಮಿಯೊಳಗಿಂದ ತೆಗೆಯುತ್ತಿದೆ. ಆದ್ದರಿಂದ ದೇಶದ 700 ಜಿಲ್ಲೆಗಳ ಪೈಕಿ ಸುಮಾರು 256 ಜಿಲ್ಲೆಗಳು ಅಂತರ್ಜಲದ ತೀವ್ರ ಕೊರತೆ ಹೊಂದಿವೆ. ಇಂಥ ಗಂಭೀರ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಕೇಂದ್ರ ಸರಕಾರವು ಪ್ರಥಮ ಬಾರಿಗೆ ದೇಶದ ಜಲಗಣತಿ ಕೈಗೊಂಡಿರುವುದಲ್ಲದೆ 'ಜಲಶಕ್ತಿ ಅಭಿಯಾನ'ದ ಮೂಲಕ ನೀರಿನ ಪರಿಣಾಮಕಾರಿ ವ್ಯವಸ್ಥೆಯ ನಿರ್ಮಾಣವನ್ನು ಆದ್ಯತೆಯಾಗಿಸಿದೆ. ಜಲಶಕ್ತಿಯ ವಿಶೇಷ ಯಂತ್ರಾಲಯದ ನಿರ್ಮಾಣವು ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ.



ಇತ್ತೀಚೆಗೆ ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ತೀವ್ರವಾಗಿರುವುದು ದೊಡ್ಡ ಸುದ್ದಿಯಾಗಿದೆ. ಹಾಗೆ ನೋಡಿದರೆ, ನೀರಿನ ಬರಗಾಲವು ಇಡೀ ಕರ್ನಾಟಕ ರಾಜ್ಯವನ್ನೇ ಪೀಡಿಸುತ್ತಿದ್ದು 220 ತಾಲೂಕುಗಳ ಸುಮಾರು 7000 ಹಳ್ಳಿಗಳಲ್ಲಿ ನೀರಿನ ಕೊರತೆಯಿದೆ. 2023ರಲ್ಲಿ ಸಾಕಷ್ಟು ಮಳೆಯಾಗದಿರುವುದೇ ಇಂಥ ದುರವಸ್ಥೆಗೆ ಕಾರಣ. ಕೃಷ್ಣರಾಜ ಸಾಗರ ಜಲಾಶಯದಲ್ಲಿನ ನೀರಿನ ಮಟ್ಟವು ಫೆಬ್ರವರಿಯಲ್ಲಿ ಕಳೆದ ಐದು ವರ್ಷದ ಅತಿ ಕಡಿಮೆ ಮಟ್ಟ ತಲುಪಿದ್ದಲ್ಲದೆ, ಅಂತರ್ಜಲದ ಮಟ್ಟ ಕುಸಿದುಹೋಗಿದೆ. ಕಳೆದ ಮೂವತ್ತು ನಲ್ವತ್ತು ವರ್ಷಗಳಲ್ಲಿಯೇ ಇಂಥ ಬರಗಾಲವನ್ನು ರಾಜ್ಯ ಕಂಡಿಲ್ಲವೆಂಬ ಉಪ ಮುಖ್ಯಮಂತ್ರಿಯವರ ಹೇಳಿಕೆಯನ್ನು ಇಲ್ಲಿ ಗಮನಿಸಬಹುದು.

ಈ ಹಿನ್ನೆಲೆಯಲ್ಲಿ ಬೆಂಗಳೂರು ಅನುಭವಿಸುತ್ತಿರುವ ನೀರಿನ ಕೊರತೆಯನ್ನು ವಿಶ್ಲೇಷಿಸಬಹುದು. ಪ್ರಖರ ಬೇಸಗೆ ಬರುವಷ್ಟರಲ್ಲೇ ಈ ಅಭಾವ ಕಾಣಿಸಿಕೊಂಡಿದೆ. ಬೋರ್‌ವೆಲ್ ಮತ್ತು ಕಾವೇರಿ ನೀರಿನ ಮೂಲವನ್ನು ಬೆಂಗಳೂರು ಅವಲಂಬಿಸಿದೆ. ಮಳೆಯ ಕೊರತೆಯಿಂದಾಗಿ ಬಿಬಿಎಂಪಿ ಕೊರೆಸಿದ ಸುಮಾರು 11,000 ಬೋರ್‌ವೆಲ್‌ಗಳಲ್ಲಿ 1300 ಬತ್ತಿ ಹೋಗಿದ್ದರೆ, 3,700ರಲ್ಲಿ ನೀರಿನ ಮಟ್ಟ ಇಳಿದು ಹೋಗಿದೆ. ನೀರನ್ನು ಪೂರೈಸುವ ಇನ್ನೊಂದು ಬಗೆಯಾದ ಟ್ಯಾಂಕರುಗಳ ಬೇಡಿಕೆ ಹೆಚ್ಚಿದ್ದರಿಂದಲೂ ನೀರು ಸುಲಭವಾಗಿ ಸಿಗದಂತಾಯಿತು. ಏರುತ್ತಿರುವ ಬೆಂಗಳೂರಿನ ಜನಸಂಖ್ಯೆ ಮತ್ತು ಬಹುಮಾಳಿಗೆಯ ಅಪಾರ್ಟ್‌ಮೆಂಟ್‌ಗಳ ಬಾಹುಳ್ಯದಿಂದಾಗಿ ನಗರಿಯಲ್ಲಿ ನೀರಿನ ಅಭಾವ ಹೆಚ್ಚಿದೆ. ಬೆಂಗಳೂರು ಶೀಘ್ರಗತಿಯಲ್ಲಿ ವಿಸ್ತರಿಸುತ್ತಿದ್ದು ಅತ್ತ ವಿಮಾನ ನಿಲ್ದಾಣವಿರುವ ದೇವನಹಳ್ಳಿ ಇತ್ತ ತಮಿಳುನಾಡಿನ ಗಡಿಯ ತನಕ. ಇನ್ನೊಂದೆಡೆ ನೆಲಮಂಗಲ ಮತ್ತು ಮೈಸೂರು ದಿಕ್ಕಿನಲ್ಲಿ ನಗರಿಯು ಚಾಚಿಕೊಳ್ಳುತ್ತಿದೆ. ಈ ವಿಸ್ತರಣೆಗೆ ತಕ್ಕಂತೆ ನೀರನ್ನು ಒದಗಿಸುವುದು ಸವಾಲಾಗಿದೆ. ಬೆಂಗಳೂರಿನ ಹರಹು ಮತ್ತು ಜನಸಂಖ್ಯೆ ಹೀಗೆಯೇ ಬೆಳೆಯುತ್ತ ಹೋದರೆ 2031ರ ಹೊತ್ತಿಗೆ ಸುಮಾರು 20.3 ಮಿಲಿಯನ್‌ಗೆ ಜನಸಂಖ್ಯೆ ಹೆಚ್ಚುವ ನಿರೀಕ್ಷೆಯಿದೆ. ವರ್ಷಕ್ಕೆ ಸರಾಸರಿ 3 ಪ್ರತಿಶತ ಜನಸಂಖ್ಯಾ ಹೆಚ್ಚಳಕ್ಕೆ ಬೇಕಿರುವ ನೀರಿನ ಅಗತ್ಯವನ್ನು ಈಡೇರಿಸಲು ಬರೀ ಕಾವೇರಿ ನೀರಿನ ಮೂಲವನ್ನು ಅವಲಂಬಿಸುವುದು ಅಸಾಧ್ಯದ ಮಾತೆಂಬುದು ತಿಳಿಯದ ವಿಚಾರವೇನೂ ಅಲ್ಲ.

ಬೆಂಗಳೂರಿನ ಸುತ್ತಮುತ್ತ ಇರುವ ಅದೆಷ್ಟೋ ಕೆರೆಗಳು ಅಂತರ್ಜಲ ಮಟ್ಟವನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ವಸ್ತುಸ್ಥಿತಿಯೆಂದರೆ ಅವುಗಳಲ್ಲಿ ಹೆಚ್ಚಿನವು ಮಳೆಯ ಅಭಾವದಿಂದ ಬತ್ತಿಹೋಗಿವೆ. ಹೀಗಾಗಿ ಅಂತರ್ಜಲದ ಮಟ್ಟ ಕುಸಿದುಹೋಗಿದೆ. ಸರಕಾರದ ಹೇಳಿಕೆಯ ಪ್ರಕಾರ ಬೆಂಗಳೂರಿಗೆ ದೈನಂದಿನ ಸುಮಾರು 2,600 ಮಿಲಿಯನ್ ಲೀಟರ್ ನೀರಿನ ಅಗತ್ಯವಿದ್ದು ಈ ಪೈಕಿ 1470 ಎಂಎಲ್‌ಡಿಯಷ್ಟು ಕಾವೇರಿಯಿಂದ 650 ಎಂ ಎಲ್‌ಡಿಯಷ್ಟು ಬೋರ್‌ವೆಲ್‌ನಿಂದ ಸಿಗುತ್ತಿದೆ. ಸುಮಾರು 500

*PAGE DONATED BY : **SHRI ROKESH HEGDE & FAMILY, DAHISAR***

ಮಿಲಿಯನ್ ಲೀಟರ್‌ನಷ್ಟು ನೀರಿನ ಕೊರತೆಯಿದೆ. ಅದನ್ನು ಟ್ಯಾಂಕರ್ ಮತ್ತಿತರ ರೀತಿಯಲ್ಲಿ ನೀಗಲು ಕ್ರಮ ಕೈಕೊಳ್ಳಲಾಗುತ್ತಿದೆ. ಅಂಕಿ ಸಂಖ್ಯೆಯ ಪ್ರಕಾರ 11.04 ಟಿಎಂಸಿ ನೀರು ಕಾವೇರಿಯಲ್ಲಿ ಮತ್ತು 9. 02 ಟಿಎಂಸಿ ನೀರು ಕಬಿನಿಯಲ್ಲಿ ಲಭ್ಯವಿದ್ದು, ಜೂನ್‌ವರೆಗಿನ ಪೂರೈಕೆಯನ್ನು ನಿರ್ವಹಿಸಬಹುದೆಂದು ಹೇಳಲಾಗುತ್ತಿದೆ. ಜತೆಗೆ ಹೊಸ ಬೋರ್‌ವೆಲ್‌ಗಳ ಕೊರೆಯುವಿಕೆಯಿಂದ ಹೆಚ್ಚುವರಿ ನೀರನ್ನು ಶೋಧಿಸುವ ಯತ್ನಗಳಾಗುತ್ತಿವೆ. ಕೆ. ಸಿ. ವ್ಯಾಲಿಯಲ್ಲದೆ ಇತರ ಕೆರೆಗಳನ್ನು ನೀರಿನಿಂದ ತುಂಬಿಸಿಟ್ಟು ಅಂತರ್ಜಲವನ್ನು ಹೆಚ್ಚಿಸುವ ಕಡೆ ಗಮನಹರಿಸಲಾಗಿದೆ. ಟ್ಯಾಂಕರ್ ಮಾಫಿಯಾದಿಂದಾಗಿ ನೀರಿನ ದರವು ಮುಗಿಲು ಮುಟ್ಟಿದಂತಾಗಲು, ಟ್ಯಾಂಕರ್ ಎಷ್ಟು ದೂರದಿಂದ ಬರುವುದು ಎಂಬುದರ ಆಧಾರದ ಮೇಲೆ ಸರಕಾರವು ದರವನ್ನು ನಿಗದಿಪಡಿಸಿದೆ. ನೀರಿನ ಹಾಹಾಕಾರವಿದ್ದಲ್ಲಿ ಕ್ಷಿಪ್ರವಾಗಿ ನೆರವಾಗಲೆಂದು ಸಹಾಯವಾಣಿಯನ್ನು ಸಜ್ಜುಗೊಳಿಸಲಾಗಿದೆ. ನೀರಿನ ದುರ್ಬಳಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅನೇಕ ನಿರ್ದೇಶನಗಳನ್ನು ನೀಡಲಾಗಿದೆ. ಇದು ಬೆಂಗಳೂರಿಗೆ ಒದಗಿರುವ ಜಲಕ್ಷಾಮವನ್ನು ಎದುರಿಸುವತ್ತ ಆಳುಗ ವ್ಯವಸ್ಥೆ ಕೈಗೊಂಡಿರುವ ಕ್ರಮಗಳು. ಇತ್ತೀಚೆಗೆ ಕೈಗೊಂಡ ಕಾವೇರಿಯ ಐದನೇ ಹಂತದ ಯೋಜನೆಯು ನೀರಿನ ಸಮಸ್ಯೆ ನೀಗಿಸುವಲ್ಲಿ ದೂರದರ್ಶಿ ಕ್ರಮವೆನ್ನಲಾಗಿದೆ.

ಹಾಗೆಂದ ಮಾತ್ರಕ್ಕೆ ಇದು ಬೆಂಗಳೂರಿಗಷ್ಟೇ ಸೀಮಿತವಾಗಿರುವ ಸಮಸ್ಯೆಯೆಂದು ಭಾವಿಸಬಾರದು. ಬಹುತೇಕ ಮಹಾನಗರಿಗಳು ನೀರಿನ ಅಭಾವದ ಸುಳಿಯಲ್ಲಿ ಸಿಲುಕಿವೆ. ದೇಶದ ಪ್ರಮುಖ ಜಲಾಶಯಗಳು ಮಾರ್ಚ್ ತಿಂಗಳಲ್ಲಿ ಕಳೆದ ಐದು ವರ್ಷಗಳಲ್ಲಿಯೇ ಅತ್ಯಂತ ಕಡಿಮೆ ಮಟ್ಟವನ್ನು ತಲುಪಿವೆ. ಕೇಂದ್ರ ಸರಕಾರದ ಅವಗಾಹನೆಯಲ್ಲಿರುವ 150 ಭಾರೀ ಜಲಾಶಯಗಳು, ಕಳೆದ ವಾರದ ಅಳತೆಯಂತೆ ಪ್ರತಿಶತ 40 ರಷ್ಟೇ ತುಂಬಿವೆ ಎನ್ನಲಾಗಿದೆ. ಇವು ಕೃಷಿಕಾರ್ಯ, ಕುಡಿಯುವ ನೀರು ಮತ್ತು ವಿದ್ಯುತ್ ಸ್ಥಾವರಗಳಿಗೆ ನೀರು ಒದಗಿಸುವ ಜಲಾಶಯಗಳು.

ಮಹಾರಾಷ್ಟ್ರ, ಆಂಧ್ರಪ್ರದೇಶ, ಪಂಜಾಬ್ ಮತ್ತು ಉತ್ತರ ಪ್ರದೇಶದಂಥ ಕೃಷಿ ಮತ್ತು ಕೈಗಾರಿಕಾ ಬಾಹುಳ್ಯದ ಪ್ರದೇಶಗಳಲ್ಲಿ ನೀರಿನ ಮಟ್ಟವು ಹತ್ತು ವರ್ಷದ ಸರಾಸರಿ ಮಟ್ಟಕ್ಕಿಂತ ತಳಮುಟ್ಟಿರುವುದಾಗಿ ತಿಳಿದುಬಂದಿದೆ. 'ಎಲ್‌ನಿನೊ' ಪರಿಣಾಮ ಕಳೆದ ವರ್ಷದ ಕಡಿಮೆ ಮಳೆ ಈ ಎಲ್ಲ ಸಮಸ್ಯೆಗಳಿಗೂ ಮುಖ್ಯ ಕಾರಣ. ಚೆನ್ನೈ, ಮುಂಬೈ, ದೆಹಲಿ, ಕೊಲ್ಕತ್ತಾ ಮಹಾನಗರಿಗಳೂ ಈ ವರ್ಷ ಒಂದಲ್ಲಾ ಒಂದು ರೀತಿಯಲ್ಲಿ ನೀರಿನ ಬವಣೆ ಕಂಡಿವೆ. ಕೆಲ ನಗರಗಳಿಗೆ ಹೊಂದಿಕೊಂಡಂತಿರುವ ನದಿಗಳು ಮತ್ತು ದೊಡ್ಡ ಜಲಾಶಯಗಳು, ಅಲ್ಲೆಲ್ಲ ನೀರು ಪೂರೈಕೆ ವ್ಯವಸ್ಥೆಯು ಪೂರ್ತಿ ಕುಸಿಯದಿರುವುದಕ್ಕೆ ಕಾರಣಗಳಾಗಿವೆ. ಬೆಂಗಳೂರಿಗೆ ಇಂಥಾ ಜಲಾಶಯಗಳ ಭಾಗ್ಯವಿಲ್ಲದಿದ್ದರೂ ಇಲ್ಲಿ ತುಂಬಿರುವ ಮರ-ಗಿಡಗಳ ಹಸಿರಿನ ಸಿರಿವಂತಿಕೆಯಿಂದಾಗಿ 'ಉದ್ಯಾನ ನಗರಿ' ಎಂದು ಬೆಂಗಳೂರು ಹೆಸರಾಗಿದೆ.

ಜೀವಜಗತ್ತು ಎದುರಿಸುತ್ತಿರುವ ಜಲಕ್ಷಾಮವನ್ನು ಪ್ರತ್ಯೇಕತೆಯಿಂದ ಕಾಣದೆ ಸಮಗ್ರತೆಯಿಂದ ನೋಡುವುದು ಜವಾಬ್ದಾರಿಯ ದೃಷ್ಟಿಯಾಗುತ್ತದೆ. ಹೆಚ್ಚುತ್ತಿರುವ ಜನಸಂಖ್ಯೆಗೆ ತಕ್ಕಂತ ಉಪಯೋಗ ಯೋಗ್ಯ ನೀರಿನ ವ್ಯವಸ್ಥೆಯನ್ನು ಸರಿಹೊಂದಿಸಬಲ್ಲ ಜಲಾಭಿವೃದ್ಧಿಯು ಆಳುಗ ವ್ಯವಸ್ಥೆಯ ಮಹತ್ತರ ಜವಾಬ್ದಾರಿ. ಈ ನಿಟ್ಟಿನಲ್ಲಿ ಬೇಕಿದೆ ಅಸಾಮಾನ್ಯ ಅವಿಷ್ಕಾರ ಮತ್ತು ಸಂಶೋಧನೆ. ಕಡಿಮೆ ವೆಚ್ಚದಲ್ಲಿ ಉಪ್ಪು ನೀರನ್ನು ಶುದ್ಧೀಕರಿಸುವಿಕೆ, ಮಳೆಯ ನೀರನ್ನು ಅಗಾಧವಾಗಿ ಶೇಖರಿಸಿ ಬಳಸಬಲ್ಲ ಜಲಸ್ಥಾವರಗಳ ಸ್ಥಾಪನೆ, ನದಿಜೋಡಣೆ, ಅಂತರ್ಜಲದ ಮಟ್ಟವನ್ನು ಹೆಚ್ಚಿಸುವಿಕೆ, ಸರೋವರ ಮತ್ತು ಕೆರೆಗಳ ನೀರಿನ ಮಟ್ಟವನ್ನು ಕಾಯ್ದುಕೊಳ್ಳುವಿಕೆ, ಕೃತಕ ಮಳೆ ಇತ್ಯಾದಿ ವಿಚಾರಗಳಲ್ಲಿ ಅಸಾಮಾನ್ಯ ಸಂಶೋಧನೆಗಳಾಗಬೇಕಿದೆ. ಪರ್ಯಾವರಣದ ರಕ್ಷಣೆ ಮತ್ತು ವಾತಾವರಣದ ಸಮತೋಲನವೂ ನೀರಿನ ವ್ಯವಸ್ಥೆಯಲ್ಲಿ ಮಹತ್ವದ ಭಾಗವೆನಿಸಿಕೊಳ್ಳುತ್ತವೆ. ಬಳಸಿದ ನೀರಿನ ಮರುಬಳಕೆಯು ಪರಿಣಾಮಕಾರಿಯಾಗಬೇಕು. ನೀರಿನ ಅಪವ್ಯಯವನ್ನು ತಡೆಗಟ್ಟಲು ಕಟ್ಟುನಿಟ್ಟಿನ ನಿಯಂತ್ರಣಬೇಕು. ಇವೆಲ್ಲವೂ ತಿಳಿದಿರುವ ಸಂಗತಿಗಳೇ. ಆದರೂ ಬೇಕಿರುವುದು ಇನ್ನೂ ತುಳಿಯಲಾಗದ ಹೊಸ ಹಾದಿ.

*(ಲೇಖಕರು - ಮುಂಬೈನ ಲಾಸಾ ಸೂಪರ್ ಜೆನರಿಕ್ಸ್‌ನ ನಿರ್ದೇಶಕರು)*
*ಕೃಪೆ : ವಿಶ್ವವಾಣಿ*

## DONATIONS

| | | | |
|---|---|---|---|
| 1. | Ramesh G. Bhat - WWC | Rs. | 200000 |
| | **HAVYAKA WELFARE TRUST** | | |
| 1. | K. C. Hegde | Rs. | 5001 |
| 2. | Ganesh Bhat | Rs. | 5000 |
| 3. | Rajesh Bhat | Rs. | 5000 |
| 4. | Narayan G. Hegde | Rs. | 2002 |
| 5. | S. S. Hegde, Thane | Rs. | 2001 |
| 6. | Ganesh Bhadti | Rs. | 1100 |
| 7. | S. N. Joshi, Goregaon | Rs. | 1000 |

UIL
UGRU INDUSTRIES
*With Best Compliments from*
UGRU INDUSTRIES
**Manufacturers of Speciality food products**
Industrial Estate, Kumta,
North Kanara District, Karnataka
Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in
*ADVT.*

# ⋯⋯⋯ ಕನ್ನಡ ಸಾಹಿತ್ಯ ಗಣಿಯ ಅಸಲಿ ಚಿನ್ನದ ಗಟ್ಟಿ ⋯⋯⋯

**✍ ಶ್ಯಾಮಲಾ ಮಾಧವ, ಮುಂಬೈ**

***ತನ್ನ ಪಾಡಿಗೆ ತಣ್ಣಗೆ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದ ಖ್ಯಾತ ಕಾದಂಬರಿಕಾರ, ಭಾಷಾ ತಜ್ಞ, ಕೆ. ಟಿ. ಗಟ್ಟಿಯವರು ಶಾಶ್ವತವಾಗಿ ನೇಪಥ್ಯಕ್ಕೆ ಸರಿದಿದ್ದಾರೆ. ಕನ್ನಡ ಪ್ಲಾನೆಟ್ ಅಗಲಿದ ಚೇತನಕ್ಕೆ ಗೌರವದ ನಮನಗಳನ್ನು ಸಲ್ಲಿಸುತ್ತದೆ. ಅವರೊಂದಿಗೆ ಆಪ್ತ ಒಡನಾಟ ಹೊಂದಿದ ಖ್ಯಾತ ಲೇಖಕಿ, ಅನುವಾದಕಿ ಶ್ಯಾಮಲಾ ಮಾಧವ ಅವರ ಅಕ್ಷರ ನಮನ ಇಲ್ಲಿದೆ.***

ಸಾಹಿತ್ಯ, ಶಿಕ್ಷಣ, ವೈಚಾರಿಕತೆಯೇ ಜೀವದುಸಿರಾಗಿ, ಪುಸ್ತಕಗಳೇ ನಿಧಿಯಾಗಿ, ಮಾನವೀಯತೆಯೇ ಧರ್ಮವಾಗಿ ಬದುಕಿದವರು, ನಮ್ಮೆಲ್ಲರ ಪ್ರಿಯ ಸಾಹಿತಿ ಕೆ. ಟಿ. ಗಟ್ಟಿ ಎಂದೇ ಖ್ಯಾತರಾದ ಕೂಡ್ಲು ತಿಮ್ಮಪ್ಪ ಗಟ್ಟಿಯವರು. ಅಸಂಖ್ಯ, ಅನರ್ಘ್ಯ ಕೃತಿಗಳನ್ನು ರಚಿಸಿ ಓದುಗರ ಹೃದಯದಲ್ಲಿ ಶಾಶ್ವತವಾಗಿ ಉಳಿದವರು. ಇವರನ್ನು ಕನ್ನಡ ನಾಡು ಶಾಶ್ವತವಾಗಿ ಕಳೆದುಕೊಂಡಿತು. ಸಾಹಿತ್ಯ ಕ್ಷೇತ್ರಕ್ಕಾದ ದೊಡ್ಡ ನಷ್ಟವಿದು.

ಅವರ 'ಶಬ್ದಗಳು' ಕೃತಿ ಸುಧಾ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದಾಗ ಅದರ ನಾಯಕನ ಬುದ್ಧಿ-ಭಾವಗಳ ಸಂಘರ್ಷ ಓದುಗರಲ್ಲಿ ಹುಟ್ಟಿಸಿದ ಸಂಚಲನ ಅಪಾರ. ಮುಂದೆ ನಿರಂತರ ಹರಿದು ಬಂದ ಕರ್ಮಣ್ಯೇವಾಧಿಕಾರಸ್ತೇ, ಸಾಫಲ್ಯ, ಅಬ್ರಾಹ್ಮಣದಂತಹ ಕಾದಂಬರಿಗಳು ಆ ಕೃತಿಗಳ ಕರ್ತೃವಿನ ಬಗ್ಗೆ ಕೌತುಕವನ್ನೇ ಮೂಡಿಸಿದ್ದವು. ಬಳಿಕ ಕಾದಂಬರಿಕಾರ ಇಥಿಯೋಪಿಯಾದಿಂದ ಮರಳಿ ಬಂದು, 'ಸುಧಾ' ಕೃತಿಕಾರನ ಪರಿಚಯ ಹಾಗೂ ವಿಳಾಸ ಪ್ರಕಟಿಸಿದಾಗ ನನ್ನಂಥ ಓದುಗರ ಪಾಲಿಗೆ ನಿಧಿಯೇ ಸಿಕ್ಕಂತಾಗಿತ್ತು. ನನ್ನ ಪತ್ರವನ್ನೋದಿ ನಮ್ಮ ಮನೆಬಾಗಿಲಲ್ಲಿ ಪ್ರತ್ಯಕ್ಷರಾದ ಗಟ್ಟಿಯವರೊಡನೆ ಬೆಳೆದು ಬಂದ ನಂಟು ನಮ್ಮ ಸಾಹಿತ್ಯ ಸ್ನೇಹಬಂಧವಾಗಿ ನನ್ನನ್ನು ಪೊರೆದಿದೆ. ಬಡ ಹಿನ್ನೆಲೆಯಿಂದ ಬಂದು ಅಧ್ಯಾಪನವನ್ನೇ ವೃತ್ತಿಯಾಗಿಸಿಕೊಂಡಿದ್ದ ಗಟ್ಟಿಯವರು ಸ್ವದೇಶಕ್ಕೆ ಮರಳಿದ ಬಳಿಕ ಬರವಣಿಗೆಯನ್ನೇ ನೆಚ್ಚಿಕೊಂಡವರು. ಸ್ವಾಧ್ಯಾಯ, ವ್ಯಾಪಕವಾದ ಓದು ಅವರನ್ನು ವಿಚಾರ ಶ್ರೀಮಂತನನ್ನಾಗಿಸಿತ್ತು.



ವಿಶ್ವಸಾಹಿತ್ಯ ಕೃತಿಗಳನ್ನು ಅರಗಿಸಿಕೊಂಡು, ಭಾಷಾಶಾಸ್ತ್ರದಲ್ಲಿ ಪಾಂಡಿತ್ಯವನ್ನು ಗಳಿಸಿ, ಶಿಕ್ಷಣ ಕ್ಷೇತ್ರದ ಸಾಧ್ಯತೆಗಳ ಬಗ್ಗೆ ಸದಾ ಚಿಂತಿಸುತ್ತಿದ್ದ ಗಟ್ಟಿಯವರು ಎಲ್ಲ ಪ್ರಕಾರಗಳಲ್ಲೂ ಕೃತಿರಚನೆ ಮಾಡಿದವರು. ಆರಂಭದ ಕೃತಿಗಳಲ್ಲದೆ ರಾಗಲಹರಿ, ಸ್ವರ್ಣಮೃಗ, ನಿರಂತರ, ಅವಿಭಕ್ತರು, ಪರುಷ, ಅಂತರಂಗದ ಅತಿಥಿ, ಮಿತಿ, ಕೆಂಪು ಕಳವೆ, ನಿನ್ನೆ ಇಂದು ನಾಳೆ ಹೀಗೆ ಕೊನೆಯದಾಗಿ ಬಂದ ಮೋಹ ಚುಂಬಿತಮಾಯೆ ಇವೆಲ್ಲವೂ ಓದುಗರನ್ನು ಹಿಡಿದಿಟ್ಟ ಪರಿ ಅಪಾರ. ತುಳುವಿನಲ್ಲೂ ಕೃತಿಗಳನ್ನು ರಚಿಸಿದ ಗಟ್ಟಿಯವರ ಇಂಗ್ಲಿಷ್ ಕವನಗಳ ಅನುವಾದವೂ, ಆಕರ್ಷಕ. ಹಲವಾರು ನಾಟಕಗಳು, ರೇಡಿಯೋ ನಾಟಕಗಳು, ಬೈಲಿಂಗ್ವಲ್ ಮಾಸ್ಪಲ್, ವೈಚಾರಿಕ ಪ್ರಬಂಧಗಳ ಸಂಕಲನ ಹೀಗೆ ಸೃಷ್ಟಿಯಾದ ಗಟ್ಟಿ ಸಾಹಿತ್ಯ ಅಮೂಲ್ಯವಾದುದು. ಅವರ 'ಕೆಂಪು ಕಳವೆ' ಕಾದಂಬರಿ ರೇಡಿಯೋ ಪ್ರಸಾರವಾಗಿ ಅಪಾರ ಜನಪ್ರಿಯತೆ ಗಳಿಸಿತ್ತು.

ಉಡುಪಿಯಲ್ಲಿ ಕೆಲವರ್ಷಗಳಿದ್ದ ಬಳಿಕ ಉಜಿರೆಯ ವನಶ್ರೀಯಲ್ಲಿ ಮನೆ ಮಾಡಿ ಸಾಹಿತ್ಯ, ತೋಟದ ಕೃಷಿಯಲ್ಲಿ ಸಮಾನವಾಗಿ ತೊಡಗಿಕೊಂಡವರು. ಇಳಿವಯಸ್ಸಿನ ಸಂಕಷ್ಟಗಳು ಅವರನ್ನು ಉಜಿರೆಯಿಂದ ಮಂಗಳೂರಿಗೆ ಕರೆತಂದರೂ, ಅವರ ಶಕ್ತಿ ಕುಂದುತ್ತಾ ಬಂದಿತು. ಕೊನೆಯವರೆಗೂ ಗಟ್ಟಿಯವರ ಲೇಖನಿ ನಿಲ್ಲದಿರಲಿ ಎಂಬುದೇ ನನ್ನಾಶಯವಾಗಿತ್ತು. ಆದರೆ ಎಲ್ಲ ಬರೆದು ಮುಗಿದಿದೆ. ಇನ್ನೇನೂ ಉಳಿದಿಲ್ಲ ಎಂದು ಅವರನ್ನುವಾಗ ಬಹಳ ನೋವೆನಿಸುತ್ತಿತ್ತು. ಫ್ಯಾಂಟಸಿ ತನಗಿಷ್ಟ ಎಂದು ಅಂಥ ಕೃತಿಯನ್ನೂ ರಚಿಸಿದ ಅವರಿಗೆ ಭಾಷಣ ಮಾಡುವುದಕ್ಕಿಂತ ಶ್ರೋತೃಗಳ ಒಡನೆ ಸಂವಾದವೇ ತುಂಬಾ ಖುಶಿ ನೀಡುತ್ತಿತ್ತು.

1957ರಿಂದ ಸಾಹಿತ್ಯಕೃಷಿ ಆರಂಭಿಸಿದ ಗಟ್ಟಿಯವರು ನಿರಂತರವಾಗಿ ಕಥೆ, ಕಾದಂಬರಿ, ಕವನ, ಪ್ರಬಂಧ ಸಂಕಲನ, ನಾಟಕಗಳನ್ನು ಬರೆಯುತ್ತಲೇ ಬಂದವರು. ಇವರ ಮೊದಲ ಕಾದಂಬರಿ 'ಶಬ್ದಗಳು' 1973ರಲ್ಲಿ ಪ್ರಕಟವಾಯಿತು. ಈವರೆಗೆ 48 ಕಾದಂಬರಿಗಳು 5 ಕಥಾಸಂಕಲನಗಳು, 6 ಪ್ರಬಂಧ ಸಂಕಲನಗಳು, 22 ರಂಗ ನಾಟಕಗಳು, 17 ಬಾನುಲಿ ನಾಟಕಗಳು, 2 ಕವನ ಸಂಕಲನಗಳಲ್ಲದೆ ಆತ್ಮಕಥೆ - ತೀರ, ವ್ಯಕ್ತಿಚಿತ್ರ ಹಾಗೂ ಪ್ರವಾಸ ಕಥನಗಳನ್ನೂ ಬರೆದು ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಹೆಗ್ಗಳಿಕೆ ಇವರದು. ತುಳುಭಾಷೆಯಲ್ಲೂ ಒಂದು ಕವನ ಸಂಕಲನ ಹಾಗೂ ಕಾದಂಬರಿ ಪ್ರಕಟಿಸಿದ್ದಾರೆ. ಕೆ.ಟಿ.ಗಟ್ಟಿಯವರು ರಚಿಸಿದ 30 ಮಕ್ಕಳ ನಾಟಕಗಳು ಕನ್ನಡ ಅಂತರ್ಜಾಲ ಮ್ಯಾಗಜಿನ್‌ನಲ್ಲಿ ಪ್ರಕಟಗೊಂಡಿವೆ. ಇತರ 10 ಮಕ್ಕಳ ನಾಟಕಗಳು ಪುಸ್ತಕರೂಪದಲ್ಲಿ ಪ್ರಕಟವಾಗಿವೆ. ಮಂಗಳೂರು ಆಕಾಶವಾಣಿಯಲ್ಲಿ ಹಲವು ಭಾಷಣಗಳು, 50 ಚಿಂತನಗಳು, ಕಥೆಗಳು ಪ್ರಸಾರವಾಗಿವೆ. ಹೆಸರಿಗೆ ತಕ್ಕಂತೆ ಸಾಹಿತ್ಯಕ್ಷೇತ್ರದಲ್ಲಿ ಗಟ್ಟಿಕುಳ ಎನಿಸಿರುವ ಕೆ. ಟಿ. ಗಟ್ಟಿ ಅವರ ಒಟ್ಟು 16 ಕಾದಂಬರಿಗಳು ಸುಧಾ ವಾರಪತ್ರಿಕೆ ಒಂದರಲ್ಲೇ ಪ್ರಕಟವಾಗಿವೆ.

ನನ್ನ ಮಗ ತುಷಾರ್ ಸಾಯನ್ಸ್ ಸ್ಟ್ರೀಮ್ ತೆಗೆದುಕೊಳ್ಳುವ ಎಂಥಾ ಒತ್ತಾಯಕ್ಕೂ ಮಣಿಯದೆ ಆರ್ಟ್ಸ್ ತೆಗೆದುಕೊಂಡಾಗ, The Medical or Engineering field may lose a professional, but the nation will get a true citizen' ಎಂದು ಬರೆದವರವರು. ಗಟ್ಟಿಯವರು ಮತ್ತವರ ಪತ್ನಿ ಯಶೋದಾ ಬರೆದ ಅಸಂಖ್ಯ ಪತ್ರಗಳು ನನ್ನ ಪತ್ರ ಭಂಡಾರದಲ್ಲಿ ಅನರ್ಘ್ಯ ನಿಧಿಯಾಗಿ ಉಳಿದಿವೆ. ಮಕ್ಕಳು ಚಿತ್ ಪ್ರಭಾ, ಸತ್ಯಜಿತ್, ಪ್ರಿಯಾ ನನ್ನ ಮಕ್ಕಳಂತೆ ಪ್ರಿಯರಾಗಿ ಉಳಿದಿದ್ದಾರೆ. ನನ್ನ ಆರಂಭದ ಕೃತಿಗಳು ಬೆಳಕು ಕಾಣಲು ಕಾರಣರಾದವರು, ಸಾವಿರದ ಹನ್ನೆರಡು ಪುಟಗಳ ನನ್ನ 'ಗಾನ್ ವಿತ್‌ದ ವಿಂಡ್'ನ ಮಹಾಗಾತ್ರದ ಹಸ್ತಪ್ರತಿಯನ್ನು ಹೊತ್ತೊಯ್ದು ಬೆಂಗಳೂರು ಪ್ರಕಾಶಕರ ಕೈಯಲ್ಲಿಟ್ಟು ಅದು ಬೆಳಕಿಗೆ ಬರಲು ಕಾರಣರಾದವರು, ನನ್ನ ವಿಶ್ವ ಸಾಹಿತ್ಯ ಕೃತಿಗಳಿಗೆ ಮುನ್ನುಡಿ ಬರೆದವರು ನಮ್ಮ ಕೆ. ಟಿ. ಗಟ್ಟಿಯವರು. ಅಪಾರ ಬುದ್ಧಿಮತ್ತೆ, ಪಾಂಡಿತ್ಯ, ಜೀವನಾದರ್ಶ, ವಿಚಾರದೀಪ್ತಿ, ಮಾನವೀಯತೆಯ ಭವ್ಯಬಾಳೊಂದು ಎರಡು ವರ್ಷಗಳ ನಿಷ್ಕ್ರಿಯತೆಯ ಬಳಿಕ ಇದೀಗ ಚಿರಶಾಂತಿಗೆ ಸಂದಿದೆ. ತುಂಬಲಾರದ ನಷ್ಟ ಕನ್ನಡ ಸಾಹಿತ್ಯಲೋಕಕ್ಕೂ, ನನಗೂ. ❍

*PAGE DONATED BY : **SHRI V. G. BHAT, NIGDI***

# Thinking of Risk before Return

✍ **Vinod N. Bhat**



**Multibaggers - Peter Lynch Principles**

'So, I hope the principles of asset allocation which I explained are clear to you all?' Siddharth asked the audience. He had come as the speaker for a session with the employees of a software company started by his friend.

There were around 50 of them, mostly youngsters, and they replied in the affirmative.

'Any questions?' Siddharth asked them.

One of them raised his hand tentatively and said, 'Sir, Vikas here. Going back to what you said about risk profiles, I and few of my friends are only 25 years old. We have a long time horizon and believe we can be aggressive in risk taking. We have started SIPs in a few Mutual Funds. But we would like to invest directly in some stocks too. What is your view on that?'

'Good question Vikas. And valid point. You and your friends can definitely take some risks at this stage of your life. It's good that you have started investing in Mutual Funds first and only after that you are thinking of investing directly in stocks. Let me ask you one question. How much time, interest, and capability do you have to invest in stocks? Because, you need all three to be successful at it.'

'We do have time and interest,' Vikas replied as his friends nodded in agreement. 'But frankly we don't know much about identifying good stocks or when to buy and sell them.'

'Well then, you can start by investing only a small portion of your portfolio, say 5-10% in stocks, and see how it goes. Mind you, you should not feel bad if you end up losing most or all of it. And if you are successful, then you can think of increasing your allocation.'

'That sounds reasonable. But how do we go about it?'

'As an individual investor, it's tough to do the level of research that professional analysts do on stocks. But fortunately, a lot of information is available now on the internet.'

'Yes, we do browse through some websites and are also part of WhatsApp and telegram groups. But we don't know which ones are trustworthy.'

'That's right. Many gullible investors end up losing their savings speculating on tips shared in these groups. So, please avoid them. Instead, you can do your own research. Peter Lynch, a well-known investor, has provided some excellent principles for individual investors to identify and invest in multibagger stocks which can give good returns over time. You can refer to his principles for guidance.'

'Oh, really? We'd love to know more about the Peter Lynch principles.'

'Well, to start with you need to keep your eyes and ears open and try to identify good investment opportunities in your home, neighbourhood, or workplace.'

'Is it that simple? Can you give an example?'

'Sure. You can look at either products or services. For example, keep a lookout for home and personal care products your family uses or which you see are popular in neighbourhood shops. Nowadays, I am seeing my family members using personal care products from some new companies. These products have also started more shelf space in my neighbourhood stores and they are also prominent on eCommerce platforms. So, those companies are now on my watchlist.'

'That's a nice example.'

'Yes. Another one is that I have seen my family members ordering food more frequently now. And so is the case with others in our building. I am seeing food delivery partners coming and going in our society a lot more. That piqued my interest and I have added these companies to my watchlist.'

'That's right. Even I have seen that. But it never occurred to me to have a watchlist of companies.'

'Well, that's the starting point if you want to be a successful investor. You have to keep an eye out for such companies which are gaining traction. At your home and office, keep track of products and services that you, your family members, and colleagues seem to like and which stand out in some manner. When you go for shopping or to restaurants, see which items are popular. And you'll find many such companies around you. Some of these companies can grow and become multibaggers.'

'Is that it? That's all that's needed?'

'That's just step 1. I haven't even come to Peter Lynch's principles yet,' Siddharth responded.

'Please do tell us more,' Vikas replied in anticipation

*(to be continued)*

[Vinod Bhat is the author of the book **'The Financial Independence Marathon'** which has been recently published by Penguin India. Readers can refer to the book for many such golden nuggets. The book is available on Amazon.in at : https://www.amazon.in/Financial-Independence-Marathon-Unlock-Power/dp/0143459988]

*PAGE DONATED BY :* ***SMT. KALA BHAGWAT,*** **KHARGAR** ***IN MEMORY OF MOTHER LATE SMT. GOURI BHAT***

# ಮಾಸ ಭವಿಷ್ಯ

✍ ಶ್ರೀಪತಿ ಭಟ್

**ಮೇಷ :** ಅತಿಯಾದ ಆತ್ಮಗೌರವದ ಜೊತೆಗೆ ಅಹಂಭಾವದ ಕುರುಹು ಕಾಣುತ್ತಿದೆ. ಆರ್ಥಿಕ ಸ್ಥಿತಿಯು ನಿಮ್ಮ ಬೇಡಿಕೆಯನ್ನು ಪೂರೈಸುತ್ತದೆ. ಬಾಂಧವರೊಡನೆ ವ್ಯಾವಹಾರಿಕವಾಗಿ ಸಂಬಂಧ ಕುದುರಿಸಲು ಹಾಗೂ ನಿಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಯತ್ನಿಸುವಿರಿ. ಹೆಂಡತಿಗೆ ಆಭರಣಗಳು ದೊರೆಯುವ ಸಾಧ್ಯತೆ ಇದೆ. ವೃತ್ತಿಯಲ್ಲಿ ಸ್ವಲ್ಪ ಅಭಿವೃದ್ಧಿ ಕಾಣಬಹುದು. (ಅದೃಷ್ಟ ಸಂಖ್ಯೆ 1,9)

**ವೃಷಭ :** ಈ ವಾರ ಸರ್ಕಾರಿ ಸಂಬಂಧಿತ ಸಾಲಗಳು ಅಥವಾ ಸಹಾಯ ಧನಗಳು ಖಂಡಿತವಾಗಿ ಸಿಗುತ್ತವೆ. ನಿಮ್ಮೆಲ್ಲಾ ಕೆಲಸಗಳಿಗೆ ಒಡ ಹುಟ್ಟಿದವರು ಅಥವಾ ಸೋದರಿಯರ ಸಹಾಯ ಸಿಗುತ್ತದೆ. ಸ್ಥಿರಾಸ್ತಿಯನ್ನು ಈಗ ಖರೀದಿ ಮಾಡಬಹುದು. ಭೂಮಿಯ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಫಲಿತಾಂಶಗಳು ದೊರಕುತ್ತವೆ. ಉದರ ಸಂಬಂಧಿ ರೋಗಗಳು ಸ್ವಲ್ಪ ಕಾಣಿಸಬಹುದು. (ಅದೃಷ್ಟ ಸಂಖ್ಯೆ 5)

**ಮಿಥುನ :** ಈ ವಾರ ನಿಮ್ಮ ಆತ್ಮಗೌರವ ಹೆಚ್ಚುತ್ತದೆ. ಉತ್ತಮ ವಾಗ್ಮಿಯಾಗಿ ಹೊರಹೊಮ್ಮುವಿರಿ. ಬಂಧುಗಳೊಡನೆ ಬಾಂಧವ್ಯವನ್ನು ಸುಧಾರಣೆ ಮಾಡಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಶೀತ ಸಂಬಂಧಿ ಕಾಯಿಲೆಗಳು ಇದ್ದವರಿಗೆ ಸ್ವಲ್ಪ ಪರಿಹಾರ ಕಾಣುತ್ತದೆ. ಸಂಗಾತಿಯ ಗಳಿಕೆಯಲ್ಲಿ ಹೆಚ್ಚಳವನ್ನು ಕಾಣಬಹುದು. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. (ಅದೃಷ್ಟ ಸಂಖ್ಯೆ 1)

**ಕರ್ಕಾಟಕ :** ಸಂಗೀತಾಸಕ್ತರು ತಮ್ಮ ಸಂಗೀತದ ಮಟ್ಟವನ್ನು ತೋರಿಸಲುಬೇಕಾದ ಅವಕಾಶ ಸಿಗುತ್ತದೆ. ಕೃಷಿಯಿಂದ ಲಾಭ ಇರುತ್ತದೆ ಹಾಗೂ ಕೃಷಿಕರಿಗೆ ಬೇಕಾದ ಹಣದ ಸೌಲಭ್ಯಗಳು ದೊರೆಯುತ್ತವೆ. ನಿಮ್ಮ ಬಂಧುಗಳೊಳಗಿನ ವ್ಯಾಜ್ಯಗಳು ಕೋರ್ಟ್ ಕಚೇರಿ ಮೆಟ್ಟಿಲೇರಬಹುದು. ಮಾತುಕತೆಯಿಂದ ಬಗೆಹರಿಸಿಕೊಳ್ಳಿ. ಮಕ್ಕಳ ಏಳಿಗೆ ಉತ್ತಮವಾಗಿರುತ್ತದೆ ಹಾಗೂ ಅವರ ಬಗ್ಗೆ ಶುಭ ವಾರ್ತೆಗಳನ್ನು ಕೇಳುವಿರಿ. (ಅದೃಷ್ಟ ಸಂಖ್ಯೆ 8)

**ಸಿಂಹ :** ಈ ವಾರ ಹೆಚ್ಚು ಶಕ್ತಿ ಸಾಮರ್ಥ್ಯಗಳನ್ನು ಹೊಂದುವ ಎಲ್ಲಾ ಅವಕಾಶಗಳಿವೆ. ಮಾತನಾಡುವಾಗ ಸ್ವಲ್ಪ ಎಚ್ಚರವಿರಲಿ. ನೀವು ಮಾಡುವ ಟೀಕೆ ಟಿಪ್ಪಣಿಗಳು ನಿಮಗೆ ವಾಪಸ್ಸು ಬರಬಹುದು. ವಿದೇಶದಲ್ಲಿ ನೆಲೆಸಿರುವವರಿಗೆ ಆಸ್ತಿ ಮಾಡುವ ಯೋಗ ಇದೆ. ಧರ್ಮಪ್ರಚಾರಕರಿಗೆ ಅನಿರೀಕ್ಷಿತವಾಗಿ ವಿದೇಶಯಾನ ಯೋಗ ದೊರೆಯುತ್ತದೆ. ವೃತ್ತಿಯಲ್ಲಿ ನಿರೀಕ್ಷಿಸಿದ ಸ್ಥಾನ ದೊರೆಯದಿರಬಹುದು. (ಅದೃಷ್ಟ ಸಂಖ್ಯೆ 3).

**ಕನ್ಯಾ :** ವೃತ್ತಿಯಲ್ಲಿ ಅಭಿವೃದ್ಧಿ ಇದ್ದು ಉನ್ನತ ಸ್ಥಾನ ಸಿಗುವ ಸಾಧ್ಯತೆ ಇದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ನಿಮ್ಮ ಕೆಲಸಗಳಿಗೆ ತಾಯಿಯಿಂದ ಸೂಕ್ತ ಸಹಕಾರ ದೊರೆಯುವ ಸಾಧ್ಯತೆ. ಆಸ್ತಿ ವಿಚಾರದಲ್ಲಿ ತಗಾದೆಗಳು ಆಗುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಸಂಪೂರ್ಣ ಯಶಸ್ಸು ಸಿಗುವುದು ಕಷ್ಟ ಹಾಗೂ ಹೆಚ್ಚು ಶ್ರಮ ಹಾಕಬೇಕಾದ ಪರಿಸ್ಥಿತಿ ಇದೆ. ಪಿತ್ರಾರ್ಜಿತ ಆಸ್ತಿಗಳು ಸಿಗುವ ಸಾಧ್ಯತೆಗಳಿವೆ. (ಅದೃಷ್ಟ ಸಂಖ್ಯೆ 6)

**ತುಲಾ :** ಆಲಸಿತನ ನಿಮ್ಮನ್ನು ಕಾಡಬಹುದು. ನಿಮ್ಮ ಕೆಲಸಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಕೃಷಿ ಭೂಮಿಯನ್ನು ಹದ ಮಾಡುವುದರಲ್ಲಿ ಯಶಸ್ವಿ ಆಗುವಿರಿ. ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಹೆಚ್ಚು ಶ್ರಮವನ್ನು ಹಾಕಲೇಬೇಕಾದ ಅನಿವಾರ್ಯತೆ ಇರುತ್ತದೆ. ಸಾಲ ಕೊಟ್ಟಿರುವವರು ಹಣ ವಾಪಸ್ ಕೇಳಲು ಈಗ ಬರಬಹುದು. ಸಂಗಾತಿಯ ಆದಾಯದಲ್ಲಿ ದಿಢೀರ ಹೆಚ್ಚಳವನ್ನು ಕಾಣಬಹುದು (ಅದೃಷ್ಟ ಸಂಖ್ಯೆ 4)



**ವೃಶ್ಚಿಕ :** ಈ ವಾರ ಒಂದು ರೀತಿ ಮನಸ್ಸು ಪ್ರಫುಲ್ಲವಾಗಿರುತ್ತದೆ. ಹಣದ ಒಳ ಹರಿವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಶತ್ರುಗಳನ್ನು ಅವರದೇ ವಿಧಾನಗಳಿಂದ ಮಣಿಸುವಿರಿ ಹಾಗೂ ಅವರಿಗೆ ಎಚ್ಚರಿಕೆ ನೀಡುವಿರಿ. ಕೃಷಿಕರಿಗೆ ಅನುಕೂಲತೆಗಳು ಒದಗಿ ಬರುತ್ತವೆ. ವಿದ್ಯಾರ್ಥಿಗಳಿಗೆ ಸ್ವಲ್ಪ ಗಲಿಬಿಲಿಯಾಗಿ ಫಲಿತಾಂಶಗಳು ಕಡಿಮೆಯಾಗಬಹುದು. ಚಿನ್ನದ ಕುಸುರಿ ಆಭರಣ ತಯಾರಕರಿಗೆ ಬೇಡಿಕೆ ಹೆಚ್ಚಾಗುತ್ತದೆ. (ಅದೃಷ್ಟ ಸಂಖ್ಯೆ 2)

**ಧನು :** ವಿದ್ಯಾರ್ಥಿಗಳಿಗೆ ಉತ್ತಮ ಕಾಲವಿರುತ್ತದೆ. ಅದರಲ್ಲೂ ವಿದೇಶದಲ್ಲಿ ವ್ಯಾಸಂಗ ಮಾಡಬೇಕೆಂಬ ಆಸೆ ಇರುವವರಿಗೆ ಅನುಕೂಲಗಳಾಗುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿ ಇರುವುದರಿಂದ ಖರ್ಚು ಕಡಿಮೆ ಮಾಡಿ ಹಣ ನಿರ್ವಹಣೆ ಮಾಡಿರಿ. ಶತ್ರುಗಳು ನಿಮ್ಮ ತಂಟೆಗೆ ಬರುವುದನ್ನು ಅವರೇ ಕಡಿಮೆ ಮಾಡುವರು. ಸ್ಥಿರಾಸ್ತಿ ವಿಷಯದಲ್ಲಿ ಈಗ ಮುಂದುವರೆಯಬಹುದು (ಅದೃಷ್ಟ ಸಂಖ್ಯೆ 7)

**ಮಕರ :** ದೇವರ ದರ್ಶನಕ್ಕಾಗಿ ಕುಟುಂಬ ಸಮೇತರಾಗಿ ಹೋಗುವ ಸಾಧ್ಯತೆ ಇದೆ. ಹಣದ ಒಳಹರಿವು ಕಡಿಮೆ ಇದ್ದರೂ ಅಗತ್ಯವನ್ನು ಪೂರೈಸುತ್ತದೆ. ಮಾತಿನಲ್ಲಿ ಕಠಿಣತೆ ಬೇಡ. ಸ್ಥಿರಾಸ್ತಿಯಲ್ಲಿ ತಕರಾರುಗಳು ಬರುವ ಸಾಧ್ಯತೆಗಳಿವೆ. ಸಂಗಾತಿಯ ಒದಿಗೆ ಸಾಕಷ್ಟು ಅನುಕೂಲತೆಗಳು ದೊರೆಯುತ್ತದೆ. ಕಣ್ಣಿನ ತೊಂದರೆ ಮತ್ತು ತಲೆನೋವುಗಳು ಕಾಣಿಸಬಹುದು. ಕೃಷಿಕರಿಗೆ ಆದಾಯ ಕಡಿಮೆಯಾಗಬಹುದು. (ಅದೃಷ್ಟ ಸಂಖ್ಯೆ 1)

**ಕುಂಭ :** ಬಹಳ ಶ್ರಮಪಟ್ಟು ಕೆಲಸ ಮಾಡುವಿರಿ. ಬಂಧುಗಳೊಡನೆ ಸಂಬಂಧವನ್ನು ವೃದ್ಧಿ ಮಾಡಿಕೊಳ್ಳುವಿರಿ. ವಿದೇಶದಲ್ಲಿ ಕೆಲಸ ಮಾಡುತ್ತಿರುವವರ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ. ಆಸ್ತಿ ಮಾರಾಟ ಮಾಡಿಸುವವರಿಗೆ ಕಮೀಷನ್ ಕಡಿಮೆಯಾಗಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ದೊರೆಯುತ್ತದೆ. ಮೂತ್ರದ ತೊಂದರೆ ಅಥವಾ ಗುಹ್ಯ ರೋಗಗಳು ಇರುವವರಿಗೆ ಆರೋಗ್ಯದಲ್ಲಿ ಏರುಪೇರುಗಳಾಗಬಹುದು (ಶುಭ ಸಂಖ್ಯೆ 5).

**ಮೀನ :** ಅತಿಯಾದ ಕೊಂಕು ಮಾತು ನಿಮ್ಮ ಗೌರವವನ್ನು ಕಳೆಯ ಬಹುದು. ಹಣದ ಒಳಹರಿವು ಮಧ್ಯಮಗತಿಯಲ್ಲಿರುತ್ತದೆ. ವಿದೇಶದಲ್ಲಿರುವ ಮಕ್ಕಳಿಂದ ಧನಸಹಾಯ ದೊರೆಯುವ ಸಾಧ್ಯತೆ ಇದೆ. ಬಂಧುಗಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತದೆ. ಭೂಮಿ ವ್ಯವಹಾರ ಮಾಡುವವರಿಗೆ ಸ್ವಲ್ಪ ಮಟ್ಟಿನ ಸುಧಾರಣೆ ಇರುತ್ತದೆ (ಅದೃಷ್ಟ ಸಂಖ್ಯೆ 9)

(ಶ್ರೀ ಶ್ರೀಪತಿ ಭಟ್ ಆಚಾರ್ಯರು ಪೇಜಾವರ ಶ್ರೀಗಳ ಅಧೀನದಲ್ಲಿ ಅವರ ವಿದ್ಯಾಪೀಠ ಆಶ್ರಮದಲ್ಲಿ ಅಧ್ಯಯನ ಮುಗಿಸಿದ್ದಾರೆ. ಅವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ 20 ವರ್ಷಗಳ ಅನುಭವವಿದೆ. ವೇದ, ಉಪನಿಷತ್, ಜ್ಯೋತಿಷ್ಯದ ಪ್ರಕಾರಗಳನ್ನು ಚೆನ್ನಾಗಿ ಅಧ್ಯಯನ ಮಾಡಿ 20 ವರ್ಷಗಳ ಅನುಭವದಲ್ಲಿ ಬಡಬಗ್ಗರಿಗೆ ಸಹಾಯ ಮಾಡುತ್ತಾ ಇದ್ದಾರೆ. ಹನುಮಂತ ನಗರದ ಮಾರುತಿ ಸರ್ಕಲ್‌ನಲ್ಲಿ ಇರುವ ಬಲಮುರಿ ಗಣಪತಿ ದೇವಸ್ಥಾನದ ಪ್ರಧಾನ ಅರ್ಚಕರಾಗಿಯೂ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಸಂಪರ್ಕ ಸಂಖ್ಯೆ : 99000 00198)

*PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

# ಸಂಕ್ಷಿಪ್ತ ಸುದ್ದಿಗಳು

## ಹವ್ಯಕ ವೆಲ್ಫೇರ್ ಟ್ರಸ್ಟಿನ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ : ಸಂಸ್ಥೆಯ ಅರವತ್ತನೆಯ ವರ್ಷದ ಉದ್ಘಾಟನಾ ಸಂಭ್ರಮ

**“ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರು ಮುಂಬಯಿ ಕನ್ನಡ ಸಾಹಿತ್ಯಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟವರು” : ಮಿತ್ರಾ ವೆಂಕಟ್ರಾಜ್**

“ಮಹಾನುಭಾವರು, ಪ್ರಾತಃಸ್ಮರಣೀಯರು ಆದ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ ಹೆಸರಿನ ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿರುವುದು ಹೆಮ್ಮೆಯ ವಿಷಯ. ಇದನ್ನು ಅತ್ಯಂತ ಗೌರವದಿಂದ ಹಾಗೂ ಆತ್ಮೀಯತೆಯಿಂದ ನಾನು ಸ್ವೀಕರಿಸುತ್ತಿದ್ದೇನೆ. ಸೂರಿ ಶಾಸ್ತ್ರಿಯವರು ಮುಂಬಯಿ ಕನ್ನಡ ಸಾಹಿತ್ಯಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟವರು. ಅವರ ಹೆಸರಿನ ಪ್ರಶಸ್ತಿ ನನಗೆ ಆಶೀರ್ವಾದ. ಇದರಿಂದ ನನ್ನ ಬರವಣಿಗೆಗೆ ಇನ್ನಷ್ಟು ಬಲ ಬರಲಿ. ನನ್ನ ಸಾಹಿತ್ಯವು ಇನ್ನಷ್ಟು ಕಲಾತ್ಮಕವಾಗಿ ರೂಪುಗೊಳ್ಳಲೆಂದು ಆಶಿಸುತ್ತೇನೆ. ನಮ್ಮ ಕೃತಿಗೆ ಪ್ರಶಸ್ತಿಯು ದೊರೆತಾಗ ಓದುಗರ ಸಾಮೂಹಿಕ ಮೆಚ್ಚುಗೆಯ ದ್ಯೋತಕವಾಗಿ ಕೃತಾರ್ಥತೆಯ ಇನ್ನೊಂದು ಮಜಲನ್ನು ತಲುಪಿದ ಅನುಭವವಾಗುವುದು” ಎಂದು ಪ್ರಸಿದ್ಧ ಕತೆಗಾರರು, ಕಾದಂಬರಿಕಾರರು ಆದ ಮಿತ್ರಾ ವೆಂಕಟ್ರಾಜ್ ಅವರು 10 ಮಾರ್ಚ್, 2024ರ ರವಿವಾರದಂದು ಮುಲುಂಡ್ ಪಶ್ಚಿಮದ ಸಾರಸ್ವತವಾಡಿಯ ಶ್ರೀ ಕಛ್ ದೇಶೀಯ ಸಾರಸ್ವತ್ ಬ್ರಾಹ್ಮಿನ್ ಮಹಾಸ್ಥಾನ ಟ್ರಸ್ಟ್‌ನ ಸಭಾಗೃಹದಲ್ಲಿ ಹವ್ಯಕ ವೆಲ್ಫೇರ್ ಟ್ರಸ್ಟ್ ಆಯೋಜಿಸಿದ್ದ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 2022-23 ನೆಯ ಸಾಲಿನ ಸೂರಿ ಪ್ರಶಸ್ತಿಯನ್ನು ಸ್ವೀಕರಿಸಿದ ಸಂದರ್ಭದಲ್ಲಿ ಧನ್ಯತಾಭಾವದೊಂದಿಗೆ ನುಡಿದರು. ತಮ್ಮ ಮಾತನ್ನು ಮುಂದುವರಿಸುತ್ತಾ ಮಿತ್ರಾ ಅವರು ಪ್ರಶಸ್ತಿಗಳು ತರುವ ಜವಾಬ್ದಾರಿ ಗುರುತರವಾದದ್ದು. ಸಾಹಿತ್ಯ ಪ್ರಶಸ್ತಿಗಳು ಎಷ್ಟು ಮಹತ್ವದ್ದು ಎನ್ನುವುದು ಎಲ್ಲಾ ಕಾಲದಲ್ಲೂ ಎದ್ದಂತಹ ಪ್ರಶ್ನೆ. ಅವು ಒಬ್ಬ ಬರಹಗಾರನ ಮೌಲ್ಯಗಳನ್ನು ಗುರುತಿಸುವ ಸಾಧನವಾದಾಗ ಮಾತ್ರ ಮೌಲಿಕವಾಗಿರುತ್ತವೆ. ಸೃಜನಶೀಲತೆಯ ಮೂಲವೇ ಸಂವಹನಕ್ಕಾಗಿ ನಮ್ಮಲ್ಲಿರುವ ತುಡಿತ. ಅಂದರೆ ನಮ್ಮ ವಿಚಾರ, ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವ ಮೊದಲು ನಮ್ಮೊಳಗಿನಿಂದ ಅವುಗಳ ಮಂಥನವಾಗಿ ಅದು ಇತರರಿಗೆ ಮುಟ್ಟಿಸಲು ಯೋಗ್ಯವೇ ಎಂದು ನಿರ್ಧರಿಸುವ ಒಬ್ಬ ಬರಹಗಾರ ನಮ್ಮೊಳಗಿರುತ್ತಾನೆ. ತಮ್ಮೊಳಗೆ ಇರುವ ಓದುಗನನ್ನು ಉದ್ದೇಶಿಸಿಯೇ ಲೇಖಕ ಬರೆಯುತ್ತಿರುತ್ತಾನೆ ಎಂದು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಲಾಜಗತ್ತು ತಂಡದ ರೂವಾರಿ, ರಂಗತಜ್ಞ, ಡಾ. ವಿಜಯಕುಮಾರ್ ಶೆಟ್ಟಿ ತೋನ್ಸೆಯವರು “ಹೊರನಾಡಾದ ಮುಂಬಯಿಯಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿಯವರ ಹೆಸರು ಅಜರಾಮರವಾಗಿದೆ. ಅವರು ಎಲ್ಲ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಾನುಭಾವರು. ಹವ್ಯಕರೆಂದ ಕೂಡಲೇ ಸೂರಿ ಶಾಸ್ತ್ರಿಯವರ ಹೆಸರು ಮನದಲ್ಲಿ ಮೂಡುತ್ತದೆ. ಇಂತಹ ಮಹಾನ್ ವ್ಯಕ್ತಿಯ ಹೆಸರಿನಲ್ಲಿ ಪ್ರಶಸ್ತಿ ಕೊಡುತ್ತ ಬಂದಿರುವ ಹವ್ಯಕರು ಸೃಜನಶೀಲರು. ಕರ್ಕಿಯವರ ಹೆಸರು ಉಳಿಸಿಕೊಳ್ಳಲು ಕರ್ತವ್ಯಪಾಲನೆ ಮಾಡುವುದು ದೊಡ್ಡ ಸಾಧನೆಯಾಗಿದೆ. ಶಾಸ್ತ್ರಿಯವರ ಹೆಸರಿನಲ್ಲಿ ಕೊಡಮಾಡುವ ಈ ಪ್ರಶಸ್ತಿಯನ್ನು ಪಡೆದ ಅಂತರಾಷ್ಟ್ರೀಯ ಮಟ್ಟದ ಮಹಿಳಾ ಸಾಹಿತಿ ಮಿತ್ರಾ ವೆಂಕಟ್ರಾಜ್ ಅವರು ಭಾಗ್ಯವಂತರು. ಎಲ್ಲ ಸಮಯದಲ್ಲಿಯೂ ಸಮಯಕ್ಕೆ ಪ್ರಾಶಸ್ತ್ಯವನ್ನು ಕೊಡುವವರು ಸಾಧಕರಾಗಿ ಬೆಳೆಯುತ್ತಾರೆ. ಸಾಧನೆ ಯಾವುದೇ ವಿಷಯದಲ್ಲಿಯಾದರೂ ಅದರಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು ಮುಖ್ಯ” ಎಂದು ನುಡಿದರು.

ಕರ್ನಾಟಕ ಮಲ್ಲ ಕನ್ನಡ ದೈನಿಕದ ಸಹಯೋಗದೊಂದಿಗೆ ಆಯೋಜಿಸಿದ್ದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಹವ್ಯಕ ಸಂಸ್ಥೆಯ ಅಧ್ಯಕ್ಷರಾದ ಶಿವಕುಮಾರ ಭಾಗವತ್ ಅವರು ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಅವರ ಸ್ಮರಣಾರ್ಥ ನೀಡುತ್ತಿರುವ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಸಂಸ್ಥೆಯ ಷಷ್ಟ್ಯಬ್ದಿ ಸಮಾರಂಭದ ಸಂಭ್ರಮದ ಉದ್ಘಾಟನೆ ಇವೆರಡೂ ಕಾರ್ಯಕ್ರಮಗಳು ಒಟ್ಟಾಗಿ ನಡೆಯುತ್ತಿರುವ ಇಂದಿನ ದಿನ ಶುಭದಿನವಾಗಿದೆ. ಪೂರ್ವಜರ ದೂರದೃಷ್ಟಿತ್ವದಿಂದ ಹವ್ಯಕ ವೆಲ್ಫೇರ್ ಟ್ರಸ್ಟ್ ಈ ಮಟ್ಟಕ್ಕೆ ಬೆಳೆದಿದ್ದು, ಇದು ಭಾವೀ ಜನಾಂಗಕ್ಕೆ ಅನುಕೂಲಕರವಾಗಲಿದೆ ಎಂದು ನುಡಿದರು.

ಒಂದು ಅಕಾಡೆಮಿ ಮಾಡುತ್ತಿರುವ ಕೆಲಸವನ್ನು ಹವ್ಯಕ ಸಂಸ್ಥೆ ಮಾಡುತ್ತಿದೆ ಎಂದು ಅಂದಿನ ವಿಶೇಷ ಆಹ್ವಾನಿತ ಅತಿಥಿಯಾದ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರು ನುಡಿದರಲ್ಲದೆ ಪ್ರಶಸ್ತಿ ಪುರಸ್ಕೃತ ಮಿತ್ರಾ ವೆಂಕಟ್ರಾಜ್ ಅವರನ್ನು ಅಭಿನಂದಿಸಿದರು.

ಹವ್ಯಕ ಸಂಸ್ಥೆಯ ಮುಖವಾಣಿ ‘ಹವ್ಯಕ ಸಂದೇಶ’ದ ಸಂಪಾದಕಿ ನ್ಯಾಯವಾದಿ ಅಮಿತಾ ಭಾಗವತ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸೂರಿ ದತ್ತಿನಿಧಿಯ ಸಂಚಾಲಕಿ ತನುಜಾ ಹೆಗಡೆಯವರು ಸ್ವಾಗತ ಭಾಷಣ ಮಾಡಿದರು. ಶಶಿಕಲಾ ಹೆಗಡೆ ಪ್ರಶಸ್ತಿ ಪುರಸ್ಕೃತರಾದ ಮಿತ್ರಾ ವೆಂಕಟ್ರಾಜ್ ಅವರನ್ನು ಅಭಿನಂದಿಸಿದರು. ಅಮೃತಾ ಹೆಗಡೆಯವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಹೇಮಾ ಹೆಗಡೆಯವರು ಸನ್ಮಾನ ಪತ್ರ ವಾಚಿಸಿದರು. ಪೂರ್ಣಿಮಾ ಅಕದಾಸ್ ಹಾಗೂ ಮಹೇಶ್ ಹೆಗಡೆಯವರು ಅತಿಥಿಗಳನ್ನು

### HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**

2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**

**Donations to 'Havyaka Welfare Trust' qualify for tax deduction under section 80 (G).**

ಪರಿಚಯಿಸಿದರು. ಸಂಸ್ಥೆಯ ಉಪಾಧ್ಯಕ್ಷರಾದ ವಿಷ್ಣು ಭಾಗವತ್ ವಂದನಾರ್ಪಣೆಗೈದರು. ಕಲಾ ಭಾಗವತ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಊಟದ ವಿರಾಮದ ನಂತರ ಜರುಗಿದ ಹವ್ಯಕ ಸಂಸ್ಥೆಯ ಷಷ್ಠ್ಯಬ್ದಿ ಆಚರಣೆಯ ಉದ್ಘಾಟನಾ ಸಮಾರಂಭಕ್ಕೆ ಪ್ರಸಿದ್ಧ ವೈದ್ಯರು, ಗೋಕುಲದ ಅಧ್ಯಕ್ಷರು ಆದ ಡಾ. ಸುರೇಶ್ ರಾವ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಹವ್ಯಕ ಸಂಸ್ಥೆಯ ಅಧ್ಯಕ್ಷರಾದ ಶಿವಕುಮಾರ್ ಭಾಗವತ್, ಮುಖ್ಯ ಅತಿಥಿಗಳು, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಹಿರಿಯ ಹವ್ಯಕ ಸದಸ್ಯರು ದೀಪ ಪ್ರಜ್ವಲಿಸಿ ಅರವತ್ತನೆಯ ವರ್ಷಾಚರಣೆಗೆ ಚಾಲನೆ ನೀಡಿದರು. ಸಂಚಾಲಕರಾದ ವಿಷ್ಣು ಭಾಗವತ್ ಅವರು ಮುಂಬರುವ ವರ್ಷವಿಡೀ ನಡೆಯಲಿರುವ ಚಟುವಟಿಕೆಗಳ ಕುರಿತು ಮಾತನಾಡಿದರು. ಸುರೇಶ್ ರಾವ್ ಅವರು ಹವ್ಯಕ ಸಂಸ್ಥೆಯ ಕಾರ್ಯಕಲಾಪಗಳನ್ನು ಶ್ಲಾಘಿಸಿ, ಅರವತ್ತನೆಯ ವರ್ಷದ ಸಂದರ್ಭದಲ್ಲಿ ನಡೆಯಲಿರುವ ಎಲ್ಲ ಕಾರ್ಯಕ್ರಮಗಳಿಗೆ ಶುಭ ಹಾರೈಸಿದರು. ಸಾಹಿತಿ ಅಮಿತಾ ಭಾಗವತ್ ಅವರು ಹವ್ಯಕ ಸಂಸ್ಥೆ ಅರವತ್ತು ವರ್ಷ ನಡೆದು ಬಂದ ಬಗೆಯನ್ನು ವಿವರಿಸಿದರು. ಜ್ಯೋತಿ ಜೋಶಿಯವರು ಗಣಪತಿ ಸ್ತೋತ್ರವನ್ನು ಸ್ತುತಿಸಿದರು. ಸಂಸ್ಥೆಯ ಕಾರ್ಯದರ್ಶಿ ವಸಂತ್ ಭಟ್, ಸಹ ಕಾರ್ಯದರ್ಶಿ ಜಿ. ವಿ. ಹೆಗಡೆ, ಆಡಳಿತ ಮಂಡಳಿಯ ಸದಸ್ಯರಾದ ಪ್ರಕಾಶ್ ಹೆಗಡೆ, ಪ್ರಕಾಶ್ ಭಟ್, ರಮಣ ಭಟ್, ಶಶಿಕಲಾ ಹೆಗಡೆ ಮೊದಲಾದವರು ಉದ್ಘಾಟನಾ ಸಮಾರಂಭದ ಕಾರ್ಯಕಲಾಪಗಳಲ್ಲಿ ಸಹಕರಿಸಿದರು.

60ನೇ ವರ್ಷದ ಷಷ್ಠ್ಯಬ್ದಿಯ ಆಚರಣೆಯ ಪ್ರಯುಕ್ತವಾಗಿ ಹವ್ಯಕ ಲಾಂಛನ ಚಿತ್ರ ಉಳ್ಳ ಗಡಿಯಾರವನ್ನು ವಿತರಿಸಲಾಯಿತು. ಶ್ರೀ ರಮಣ್ ಭಟ್ ದಂಪತಿಗಳು ಇದರ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದರು.

ಸಾಂಸ್ಕೃತಿಕ ಚಟುವಟಿಕೆಯ ಅಂಗವಾಗಿ ಆಯೋಜಿಸಿದ್ದ ಹರಿಕೀರ್ತನಾ ಕಾರ್ಯಕ್ರಮದಲ್ಲಿ 'ವಿಶ್ವೇಶ ದಾಸ' ವಿದ್ವಾನ್ ಶ್ರೀ ವಿಶ್ವನಾಥ್ ಭಟ್ ಕೈರಬೆಟ್ಟು ಅವರು 'ಹನುಮಂತ ಹನುಮಂತ (ಸುಂದರ ಕಾಂಡ)' ಎಂಬ ಪ್ರಸಂಗವನ್ನು ಪ್ರಸ್ತುತಪಡಿಸಿದರು. ಪ್ರೀತಿ ಭೋಜನದೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯಗೊಂಡಿತು.

## ಶಾರದಾ ಎ. ಅಂಚನ್‌ರಿಗೆ ಪ್ರೊ. ನಳಿನಿ ವಿಶ್ವನಾಥ್ ಕಾರ್ನಾಡ್ ಸಂಸ್ಮರಣಾ ಪ್ರಶಸ್ತಿ ಪ್ರದಾನ

ಗೋರೆಗಾಂವ್ ಕರ್ನಾಟಕ ಸಂಘ , ಮುಂಬಯಿ ಪ್ರತೀ ವರುಷ ವಿಶ್ವ ಮಹಿಳಾ ದಿನಾಚರಣೆಯಂದು ಕೊಡಮಾಡುವ ಪ್ರೊ. ನಳಿನಿ ವಿ. ಕಾರ್ನಾಡ್ ಸಂಸ್ಮರಣಾ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ವಿಶ್ವ ಮಹಿಳಾ ದಿನಾಚರಣೆಯು ದಿನಾಂಕ ಮಾರ್ಚ್ 8 ರಂದು ಗೋರೆಗಾಂವ್‌ನ ಕೇಶವ ಗೋರೆ ಸ್ಮಾರಕ್ ಟ್ರಸ್ಟ್ ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ನಿತ್ಯಾನಂದ್ ಕೋಟ್ಯಾನ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಂಬಯಿ ಖ್ಯಾತ ಸಾಹಿತಿ ಡಾ. ವಿಶ್ವನಾಥ್ ಕಾರ್ನಾಡ್ ಅವರು ತಮ್ಮ ಪತ್ನಿ ನಳಿನಿ ವಿ. ಕಾರ್ನಾಡ್ ಅವರ ಸಂಸ್ಮರಣೆಗಾಗಿ ನೀಡುವ ಈ ಪ್ರಶಸ್ತಿಯನ್ನು ಲೇಖಕಿ, ಕವಯತ್ರಿ ಶಾರದಾ ಎ. ಅಂಚನ್ ಕೊಡವೂರು ಇವರಿಗೆ ಪ್ರದಾನಿಸಲಾಯಿತು. 7,500/- ನಗದು, ಫಲಪುಷ್ಪ ಹಾಗೂ ಶಾಲು ಹೊದಿಸಿ ಲೇಖಕಿಯನ್ನು ಗೌರವಿಸಲಾಯಿತು. ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಶ್ರೀಮತಿ ಕುಮಾರೇಶ್ ಆಚಾರ್ಯ ಇವರು 'ಮಹಿಳೆಯರಲ್ಲಿ ತಲೆಮಾರಿನ ಅಂತರ' ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಶಾರದಾ ಅಂಚನ್ ಅವರ ಪತಿ ಆನಂದ್ ಅಂಚನ್ ಕೂಡ ಉಪಸ್ಥಿತರಿದ್ದರು. ಮುಂಬಯಿ ಲೇಖಕಿ, ಸಾಹಿತಿ ಶ್ರೀಮತಿ ಶಾರದಾ ಎ. ಅಂಚನ್ ಇವರು ಇದುವರೆಗೆ ಸುಮಾರು ಹದಿನೇಳು ಕೃತಿಗಳನ್ನು ಪ್ರಕಟಿಸಿದ್ದು ಇವರ 'ಪಾಡ್ದನ' ತುಳು ಕವನ ಸಂಕಲನಕ್ಕೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ರಕ್ತವೇ ಜೀವನದಿ' ವೈದ್ಯಕೀಯ ಕೃತಿಗೆ ವಿಶ್ವೇಶ್ವರಯ್ಯ ಇಂಜಿನೀಯರಿಂಗ್ ಪ್ರತಿಷ್ಠಾನದ ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ದಿ. ಡಾ. ಎಚ್. ನರಸಿಂಹಯ್ಯ ದತ್ತಿ ಪ್ರಶಸ್ತಿ ಹಾಗೆಯೇ ಇವರ ಇನ್ನೊಂದು ವೈದ್ಯಕೀಯ ಕೃತಿ 'ರಕ್ತಶುದ್ಧಿ- ಆರೋಗ್ಯವೃದ್ಧಿ' ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಬಿಸಲೇರಿ ಜಯಣ್ಣ ಮತ್ತು ಬಿಸಲೇರಿ ಬ್ರದರ್ಸ್ ದತ್ತಿ ಪ್ರಶಸ್ತಿ' ಹಾಗೂ 'ನಡೆ ನೀ ಮುಂದೆ' ಕವನ ಸಂಕಲನಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘ ಕೊಡಮಾಡುವ 'ಶ್ರೀ ಕ್ಷೇತ್ರ ಧರ್ಮಸ್ಥಳ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ' ಲಭ್ಯವಾಗಿದೆ.

## ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ (ರಿ.) ಮುಂಬಯಿ ವತಿಯಿಂದ ಚೆನ್ನಭೈರಾದೇವಿ ಪ್ರಶಸ್ತಿ ಪ್ರದಾನ ಸಮಾರಂಭ "ಗಟ್ಟಿ ಮನಸ್ಸಿನ ದಿಟ್ಟ ಮಹಿಳೆ ಲತಿಕಾ ಭಟ್"

**- ಕೃಷ್ಣಮೂರ್ತಿ ಹೆಬ್ಬಾರ**

ಮುಂಬಯಿಯ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ ಕೊಡಮಾಡುವ 'ಚೆನ್ನಭೈರಾದೇವಿ ಪ್ರಶಸ್ತಿ- 2024' ಪ್ರದಾನ ಸಮಾರಂಭವು ದಿನಾಂಕ 10.03.2024 ರವಿವಾರ ಇಳಿಹೊತ್ತು 3.30ರಿಂದ ಸಿರ್ಸಿ ಸನಿಹದ ಅಬ್ರಿಮನೆಯ 'ಸುಯೋಗಾಶ್ರಮ' (ಹಿರಿಯರ ಮನೆ)ದಲ್ಲಿ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ ಮುಂಬಯಿ (ರಿ) ಹಾಗೂ ಸುಯೋಗಾಶ್ರಮದ ಸಹಕಾರದಲ್ಲಿ ಹಿರಿಯ ಪತ್ರಕರ್ತ ಜಯಪ್ರಕಾಶ ಹಬ್ಬು ಅವರ ಹಿರಿತನದಲ್ಲಿ ನಡೆಯಿತು. ಅಧ್ಯಕ್ಷತೆ ವಹಿಸಿ ಮಾತನಾಡಿದ ಕೃಷ್ಣಮೂರ್ತಿ ಹೆಬ್ಬಾರ ಲತಿಕಾ ಅವರ ನಿಸ್ವಾರ್ಥ ಸೇವಾತತ್ಪರತೆಯನ್ನು ಶ್ಲಾಘಿಸಿದರಲ್ಲದೆ, ನಿರ್ಲಕ್ಷಿತ ಹಿರಿಯರ ಸೇವೆ ತಪಸದೃಶವಾದದ್ದು. ಗಟ್ಟಿ ಮನಸ್ಸಿನ ದಿಟ್ಟ ಮಹಿಳೆಗೆ ಮಾತ್ರ ಇಂತಹ ಕೈಂಕರ್ಯದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿ, ಶ್ರೇಷ್ಠ ಮಹಿಳೆಯ ಹೆಸರಿನಲ್ಲಿ ನೀಡುವ ಪ್ರಶಸ್ತಿ ಸ್ವೀಕರಿಸಿದ ಶ್ರೀಮತಿ ಲತಿಕಾ ಭಟ್ ಅವರನ್ನು ಅಭಿನಂದಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ವಿಶ್ರಾಂತ ಸಂಪಾದಕ ಅಶೋಕ ಹಾಸ್ಯಗಾರ ಮಾತನಾಡಿ ಭಾರತೀಯ ಚಾರಿತ್ರಿಕ ಪರಂಪರೆಯಲ್ಲಿ 54 ವರ್ಷ ಸುದೀರ್ಘವಾಗಿ ರಾಜ್ಯಾಡಳಿತ ನಡೆಸಿದ ರಾಣಿ ಚೆನ್ನಭೈರಾದೇವಿ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿ ನಿಸ್ವಾರ್ಥದಿಂದ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡ ಮಹಿಳೆಯನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವ ಮುಂಬಯಿಯ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ಕಾರ್ಯ ಮಾದರಿಯಾದದ್ದು ಎಂದರಲ್ಲದೆ ಲತಿಕಾ ಭಟ್ ತಮ್ಮ ಜೀವಿತಾವಧಿಯ ಗಳಿಕೆಯನ್ನು ವ್ಯಯಿಸಿ ನಿರ್ಲಕ್ಷಿತ, ನಿರ್ವಸಿತ ಹಿರಿಯರ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿರುವುದು ಸಮಾಜ ಹಾಗೂ ನಮಗೆ ಮಾದರಿ ಎಂದರು.

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

ಪ್ರಶಸ್ತಿ ಸ್ವೀಕರಿಸಿದ ಲತಿಕಾ ಭಟ್ ನಾನು ನನ್ನ 40ನೇ ವಯಸ್ಸಿನಲ್ಲಿ ಈ ನಿರ್ಧಾರ ತೆಗೆದುಕೊಂಡೆ. ಆ ದೇವರ ಸಂಕಲ್ಪದಂತೆ ನಿರ್ವಹಿಸುತ್ತಿದ್ದ ಆಡಳಿತಾಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿದೆ. 12 ವರ್ಷಗಳ ಹಿಂದೆ ಅಬ್ರಿ ಮನೆಯಲ್ಲಿ ಜಾಗ ಪಡೆದು ಚಿಕ್ಕ ಬಿಡಾರ ಹೂಡಿದೆ. ಮುಂದೆ ಅನೇಕ ಅಡೆ-ತಡೆಗಳು, ಅವಮಾನ, ಮೂದಲಿಕೆ, ತಿರಸ್ಕಾರದಂತಹ ಮಾತುಗಳನ್ನು ಸಹಜವಾಗಿಯೇ ಸ್ವೀಕರಿಸಿದೆ. ಬಾಹ್ಯ ಪ್ರಾಪಂಚಿಕ ಸಂಗತಿಗಳಿಗೆ ಕಿವಿಗೊಡದೆ, ಸ್ಪಂದಿಸದೆ, ಪ್ರತಿಕ್ರಿಯಿಸದೆ ಅಸಹಾಯಕರ, ಹಿರಿಯರ ಸೇವೆಯಲ್ಲಿ ನಿರತನಾಗಿರುವೆ. ಪ್ರಶಸ್ತಿಗಳು ನನ್ನನ್ನು ಹುಡುಕಿಕೊಂಡು ಬರುತ್ತವೆ. ಹಿರಿಯರ ಸೇವೆಯಲ್ಲಿ ನನಗೆ ಆನಂದವಾಗುತ್ತದೆ. ಚೆನ್ನಭೈರಾದೇವಿಯಂತಹ ಪುಣ್ಯವಂತೆಯ ಹೆಸರಿನಲ್ಲಿರುವ ಪ್ರಶಸ್ತಿ ಬಂದಿರುವುದು ಹಿರಿಯರ ಆಶೀರ್ವಾದ ಎಂದರು.

ಇದೇ ಶುಭವಸರದಲ್ಲಿ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಹಾಗೂ ಕಾರ್ಯದರ್ಶಿ ವಿಶ್ವನಾಥ ದೊಡ್ಮನೆ ಸಂಪಾದಕತ್ವದಲ್ಲಿ ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನ ಪ್ರಕಟಿಸಿರುವ 25 ಕ್ಕೂ ಅಧಿಕ ಅನುಭವಿ ಲೇಖಕರಿಂದ ಕೂಡಿರುವ 'ಯಾರು ಆಳಿದರೇನು ನಾವು ರಾಗಿ ಬೀಸೋದು ತಪ್ಪುತ್ತಾ' ಕೃತಿ ಲೋಕಾರ್ಪಣೆಗೊಂಡಿತು.

ಸ್ಥಳೀಯವಾಗಿ ಕಾರ್ಯಕ್ರಮ ಸಂಘಟಿಸಿದ ಜಯಪ್ರಕಾಶ ಹಬ್ಬು ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ದಿನೇಶ ಭಾಗವತ ಪ್ರಾರ್ಥನೆ ಮಾಡಿದರು. ಮಾಧವ ಶರ್ಮಾ ಪ್ರಾಸ್ತಾವಿಕವಾಗಿ ಮಾತನಾಡಿ ಪ್ರತಿಷ್ಠಾನದ ಕುರಿತು ಮಾಹಿತಿ ಹಂಚಿಕೊಂಡರು. ಪ್ರಶಸ್ತಿ ಸಂಚಾಲಕ ಕೇಶವ ಹೆಗಡೆ ಕಿಬ್ಬೆ, ಲತಿಕಾ ಭಟ್ ಅವರ ತಂದೆ ಕುದಬೈಲ್ ಕೃಷ್ಣ ಭಟ್, ಮುಂಬಯಿ ಹವ್ಯಕ ಸಂದೇಶದ ಮಾಜಿ ಸಂಪಾದಕರಾದ ಡಾ। ಆರ್. ಎನ್. ಹೆಗಡೆ ಭಂಡಿಮನೆ, ಹಿರಿಯ ಅಂಕಣಕಾರ ಡಿ. ಎಸ್. ನಾಯಕ ಹಾಗೂ ಸುಯೋಗಾಶ್ರಮದ ಹಿರಿಯರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಶ್ರೀ ಗಿರಿಧರ ಕಾರ್ಯಕ್ರಮ ನಿರೂಪಿಸಿದರು. ಸಭಾ ಕಾರ್ಯಕ್ರಮದ ಬಳಿಕ ಕುಮಾರಿ ಪ್ರಿಯಾಂಕಾ ಪರಮಾನಂದ ಹೆಗಡೆ ಅವರಿಂದ ಹರಿಕೀರ್ತನೆ ಕಾರ್ಯಕ್ರಮ ನಡೆಯಿತು. ಜಿ. ವಿ. ಕೊಪ್ಪಲತೋಟ ವಂದಿಸಿದರು.

## ಮುಂಬೈ ವಿ. ವಿ. ಕನ್ನಡ ವಿಭಾಗ, ಡಾ. ವಿಶ್ವನಾಥ ಕಾರ್ನಾಡ್ ಪ್ರತಿಷ್ಠಾನ : ಪ್ರೊ. ಕುಂದಣಗಾರ ಸಂಸ್ಮರಣೆ, ವಾರ್ಷಿಕ ಪ್ರಶಸ್ತಿ, ವಿಕಾಸ ಪುಸ್ತಕ ಬಹುಮಾನ ಪ್ರದಾನ

ಸಾಹಿತ್ಯ ಎನ್ನುವುದು ಒಂದು ಪ್ರಜ್ಞೆ, ಆ ಪ್ರಜ್ಞೆ ಅಭಿವ್ಯಕ್ತಗೊಳ್ಳುವುದು ಶಬ್ದಗಳ ಮೂಲಕ. ನಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಬರವಣಿಗೆ ಮಾಡಬೇಕು. ಯಾರಲ್ಲಿಯೂ ಹೇಳುವುದಕ್ಕಾಗದೆ ಇರುವ ಭಾವನೆಗಳನ್ನು ಬರೆಯಬಹುದು. ಬರವಣಿಗೆ ಕಷ್ಟ ಅಲ್ಲ. ವಿಶ್ವವಿದ್ಯಾಲಯವು ಸಾಹಿತ್ಯಕ್ಕೆ ವರ್ಕ್‌ಶಾಪ್ ಇದ್ದಂತೆ ಎಂದು ಮುಂಬೈಯ ಹಿರಿಯ ಸಾಹಿತಿ, ನಿವೃತ್ತ ಪ್ರಾಧ್ಯಾಪಕರಾದ ಡಾ. ವಿಶ್ವನಾಥ್ ಕಾರ್ನಾಡ್ ಅವರು ಅಭಿಪ್ರಾಯಪಟ್ಟರು. ಅವರು ಮಾ. 16ರಂದು ಮುಂಬೈ ವಿವಿ ಕನ್ನಡ ವಿಭಾಗ ಹಾಗೂ ಡಾ. ವಿಶ್ವನಾಥ್ ಕಾರ್ನಾಡ್ ಪ್ರತಿಷ್ಠಾನ, ಮುಂಬೈ ಇವರ ಸಂಯುಕ್ತ ಆಶ್ರಯದಲ್ಲಿ, ಮುಂಬೈ ವಿಶ್ವವಿದ್ಯಾಲಯದ ತಿಲಕ ಭವನ, ಭೂಗೋಳ ವಿಭಾಗದ ಸಭಾಗೃಹದಲ್ಲಿ ನಡೆದ ಪ್ರೊ. ಕುಂದಣಗಾರ ಸಂಸ್ಮರಣೆ, ಡಾ. ವಿಶ್ವನಾಥ್ ಕಾರ್ನಾಡ್ ಅಭಿನಂದನ, ವಾರ್ಷಿಕ ಪ್ರಶಸ್ತಿ ಪ್ರದಾನ, ವಿಕಾಸ ಪುಸ್ತಕ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ವಿಶ್ವನಾಥ್ ಕಾರ್ನಾಡ್ ಪ್ರತಿಷ್ಠಾನವು ಈ ಬಾರಿ ಮುಂಬೈಯ ಮೂರು ಅತ್ಯುತ್ತಮ ಕೃತಿಗಳನ್ನು ಆಯ್ಕೆ ಮಾಡಿರುವುದು ಅತ್ಯಂತ ಸಂತಸದ ವಿಷಯ. ಇಪ್ಪತ್ತೊಂದನೆಯ ಶತಮಾನದಲ್ಲಿ ಪ್ರಕಟವಾದ ಬೆರಳೆಣಿಕೆಯ ಮಹಾಪ್ರಬಂಧಗಳಲ್ಲಿ ಒಂದಾದ ಡಾ. ವಿದುಷಿ ಶ್ಯಾಮಲಾ ಪ್ರಕಾಶ್ ಅವರ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಾಹಚರ್ಯ, ಸಾಹಿತ್ಯ ವಲಯವಾಗಿ ಮುಂಬೈ ಬೆಳೆಯಲು ಕಾರಣವಾದ ಪತ್ರಿಕೋದ್ಯಮದ ಹೆಜ್ಜೆ ಹಾದಿಯನ್ನು ಗುರುತಿಸಿದ ಡಾ. ದಿನೇಶ್ ಶೆಟ್ಟಿ ರೆಂಜಾಳ ಅವರ ಮುಂಬೈ ಕನ್ನಡ ಪತ್ರಿಕೋದ್ಯಮ ಮತ್ತು ಕನ್ನಡದ ಒಂದು ಒಳ್ಳೆಯ ಕಾದಂಬರಿ ಎಂದು ಜನ ಮನ್ನಣೆಗಳಿಸಿದ ನ್ಯಾಯವಾದಿ ಅಮಿತಾ ಭಾಗ್ವತ್ ಅವರ 'ನೀಲಿನಕ್ಷೆ' ಇವು ಮೂರು ಕೃತಿಗಳಿಗೆ ವಿಕಾಸ ಪುಸ್ತಕ ಬಹುಮಾನ ಸಂದಿರುವುದು ಹೆಮ್ಮೆಯ ಸಂಗತಿ. ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ವಿಶ್ವನಾಥ್ ಕಾರ್ನಾಡ್ ಪ್ರತಿಷ್ಠಾನ ಮಹತ್ವದ ಕಾರ್ಯವನ್ನು ಮಾಡುತ್ತಿದೆ. ಮುಂಬೈ ಕನ್ನಡಿಗರ ಸಾಂಸ್ಕೃತಿಕ ನಾಯಕನಾಗಿ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮುಂಬೈಯ ರಂಗತಜ್ಞ ಡಾ. ಭರತ್ ಕುಮಾರ್ ಪೊಲಿಪು ಅವರು ವಿಶ್ವನಾಥ್ ಕಾರ್ನಾಡ್ ಪ್ರತಿಷ್ಠಾನದ ವಾರ್ಷಿಕ ಪ್ರಶಸ್ತಿ-2023ಗೆ ಆಯ್ಕೆಯಾಗಿರುವುದು ನಮಗೆಲ್ಲರಿಗೂ ಅಭಿಮಾನವೆನಿಸಿದೆ. ಜಾನಪದ ಸಂಗ್ರಹಕಾರ, ಕವಿ, ಕತೆಗಾರರಾದ ಪ್ರಾಧ್ಯಾಪಕರಾದ ಡಾ. ಕಾಳೇಗೌಡ ನಾಗವಾರ ಅವರು ಅನೇಕ ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದಾರೆ. ಕನ್ನಡದ ಹಿರಿಯ ಸಾಹಿತಿ ಮಿತ್ರಾ ವೆಂಕಟ್ರಾಜ್ ಅವರ ಎಲ್ಲಾ ಕೃತಿಗಳನ್ನು ಅತ್ಯಂತ ಹೃದಯಸಂಗಮವಾಗಿ ಅನುವಾದ ಮಾಡಿದ ಹಿರಿಯ ತಂತ್ರಜ್ಞ, ಚಿತ್ರಕಲಾವಿದ, ಲೇಖಕ ಯು. ವೆಂಕಟ್ರಾಜ್ ರಾವ್ ಅವರಾಗಿದ್ದಾರೆ ಎಂದು ಒಟ್ಟು ಕಾರ್ಯಕ್ರಮಗಳ ಕುರಿತು ಪ್ರಾಸ್ತಾವನೆಗೆದ್ದೈರು.

ಡಾ. ವಿಶ್ವನಾಥ್ ಕಾರ್ನಾಡ್ ವಾರ್ಷಿಕ ಪ್ರಶಸ್ತಿ-2023 ಪ್ರಶಸ್ತಿ ಪುರಸ್ಕೃತರಾದ ರಂಗತಜ್ಞ ಡಾ. ಭರತ್ ಕುಮಾರ್ ಪೊಲಿಪು ಮತ್ತು ವಿಕಾಸ ಪುಸ್ತಕ ಬಹುಮಾನ ವಿಜೇತರಾದ ಡಾ. ದಿನೇಶ್ ಶೆಟ್ಟಿ ರೆಂಜಾಳ, ಡಾ. ಶ್ಯಾಮಲಾ ಪ್ರಕಾಶ್ ಹಾಗೂ ಅಮಿತಾ ಭಾಗ್ವತ್ ಅವರಿಗೆ ಶಾಲು ಹೊದಿಸಿ, ಸ್ಮರಣಿಕೆ, ಫಲಕ, ಫಲ, ಕೃತಿಗೌರವ, ನಗದು ಬಹುಮಾನಗಳನ್ನು ನೀಡಿ ಗಣ್ಯರ ಸಮ್ಮುಖದಲ್ಲಿ ಗೌರವಿಸಲಾಯಿತು.

**ಕೃತಿ ಬಿಡುಗಡೆ** : ಇದೇ ಸಂದರ್ಭದಲ್ಲಿ ಡಾ. ವಿಶ್ವನಾಥ್ ಕಾರ್ನಾಡ್ ಅವರ 'ಸ್ಪರ್ಶ' (ಸಾಹಿತ್ಯ ಲೇಖನಗಳ ಸಂಗ್ರಹ) ಮತ್ತು 'ನೀಲಕಮಲ' (ಅನುವಾದಿತ ಕಾದಂಬರಿ)ಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಜಾನಪದ ವಿದ್ವಾಂಸ ಡಾ. ಕಾಳೇಗೌಡ ನಾಗವಾರ ಅವರು ಎಲ್ಲಾ ಭಾಷೆಗಳಲ್ಲಿಯೂ ಸೃಜನಶೀಲತೆ ಇದೆ, ಜನಪದ ಸಾಹಿತ್ಯ ಇದೆ. ಮುಂಬೈಯಲ್ಲಿ ಬಹಳ ಅರ್ಥಪೂರ್ಣವಾದ ಕನ್ನಡ ಚಟುವಟಿಕೆಗಳು ನಡೆಯುತ್ತಿವೆ ಎಂದು ಪ್ರಶಂಸಿದರು.

ಅಂದು ಲೋಕಾರ್ಪಣೆಗೊಂಡ ಕೃತಿಗಳನ್ನು ವಿಭಾಗದ ಸಂಶೋಧನ ವಿದ್ಯಾರ್ಥಿ ಕಲಾ ಭಾಗ್ವತ್ ಅವರು ಪರಿಚಯಿಸಿದರು. ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ ಅವರು ಕಾರ್ಯಕ್ರಮವನ್ನು ಸಂಯೋಜಿಸಿ ನಿರೂಪಿಸಿದರು. ಕಲಾ ಭಾಗ್ವತ್ ಅವರು ಸ್ವಾಗತ ಗೀತೆಯನ್ನು ಹಾಡಿದರು. ಡಾ. ವಿಶ್ವನಾಥ್ ಕಾರ್ನಾಡ್ ಪ್ರತಿಷ್ಠಾನದ ಕೋಶಾಧಿಕಾರಿ ಶರತ್ ಕಾರ್ನಾಡ್ ವಂದಿಸಿದರು. ಡಾ. ವಿಶ್ವನಾಥ್ ಕಾರ್ನಾಡ್ ಪರಿವಾರ ವರ್ಗದವರು, ಮುಂಬೈಯ ಅನೇಕ ಸಾಹಿತ್ಯಾಭಿಮಾನಿಗಳು, ಸಮಾಜದ ಗಣ್ಯಾತಿಗಣ್ಯರು, ವಿಭಾಗದ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಹಾಜರಿದ್ದರು.

*PAGE DONATED BY : **SHRI A. K. BHAT, CHITRIGI & FAMILY***



Vikas Pustak Award by Vishwanath Karnad Pratishthana



Receiving award for the Novel 'Neeli Nakshe'



Nalini Karnad Prashasti to Sharada Anchan



Chennabhairadevi Prashasti to Smt. Latika Bhat by Mayura Verma Pratishtan



Talk by Shri Krishnamurthy Hebbar




## Achievement

**Kumari Shraddha,** D/o. Smt. Veena and Shri Umesh Bhat completed her M.Sc. Management from University College London. She has successfully graduated with merit. She is now working as a Business Development Specialist at a company in Mumbai.

***We wish her bright future.***

## Obituary



**Shri R. K. Bhat** (85) a native of Karki passed away after a short illness on 20 th March 2024. He started his career as a drawing teacher at Areangadi High School, Neelkod. Later he became a resident of Vasai, Mumba. He retired from MGM hospital as an artist and medical photographer.He served as a photographer for all Havyaka events and also served as convenor of marriage bureau.

He is survived by his sons Prashant, Praveen, Prashant's wife Anita and his grand children Manas and Deeksha.

***May his soul rest in peace.***

***RNI NO. MAHBIL / 2000 / 746,***
***Postal Registration No. MCN/161***
***WPP License No. MR / Tech / WPP-130 / North***

***Posted at Mumbai Patrika Channel Stg. Office Mumbai - 400 001***
**Date of Publication : 1st of every month**

**REGISTERED NEWSPAPER**

**Date of Posting :**
**2nd, 3rd of every month**

***If undelivered, please return to :***
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098.
**E-mail : havyakamumbai@hotmail.com**
**Visit : www.havyakamumbai.com**

**To,**

Published by Narayan Akadas
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

## INAUGURATION OF DIAMOND JUBILEE



















